# ಹಂಪಿ ಟೈಮ್ಸ್

HAMPI TIMES
KANNADA DAILY
ಕನ್ನಡ ದಿನಪತ್ರಿಕೆ

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

epaper.hampitimes.com | e-mail: hampitimes@gmail.com | M:94486 33038 Reg.No.PMG/KA/NK/BLY/01/2024-2026

ಸಂಪುಟ:02 • ಸಂಚಿಕೆ: 262 • ಪಿ.ಆರ್.ಜಿ.ಐ.ನಂ.:KARKAN/2023/88055 • ವಿಜಯನಗರ • 24.04.2025 • ಗುರುವಾರ • ಪುಟ:04 • ಬೆಲೆ:2
Volume:02 • Issue: 262 • PRGI No:KARKAN/2023/88055 • VIJAYANAGARA • 24.04.2025 • Thursday • Page:04 • Rs:2







## ನಿನಗೆ ನೀನೇ ಬೆಳಕು

ಶಕ್ತಿಯೆಲ್ಲ ನಿಮ್ಮೊಳಗೇ ಇದೆ
ನೀವು ಏನು ಬೇಕಾದರೂ ಮಾಡಬಲ್ಲಿರಿ,
ಎಲ್ಲವನ್ನೂ ಮಾಡಬಲ್ಲಿರಿ.
– ಸ್ವಾಮಿ ವಿವೇಕಾನಂದ

## ದೇವಾಲಯ ದರ್ಶನ



ಹಂಪಿ ಶ್ರೀ ವಿರೂಪಾಕ್ಷೇಶ್ವರ ದರ್ಶನ

ನಿತ್ಯ ಅಭಿಷೇಕ ಸಮಯ
ಬೆಳಿಗ್ಗೆ: 6:30, 10:30 ಸಂಜೆ 6:30ಕ್ಕೆ

–: ದರ್ಶನ ಸಮಯ :–
ಬೆಳಿಗ್ಗೆ 6.30 ರಿಂದ ಮಧ್ಯಾಹ್ನ 1.15ರವರೆಗೆ
ಮಧ್ಯಾಹ್ನ 3 ರಿಂದ ರಾತ್ರಿ 7.30ರವರೆಗೆ

## ಮೈಕ್ರೋ ನ್ಯೂಸ್

### ಏ.28 ಹರಪನಹಳ್ಳಿ ಶಾಸಕರಿಂದ ಜನಸ್ಪಂದನಾ

**ಹಂಪಿ ಟೈಮ್ಸ್ ಹೊಸಪೇಟೆ**
ಹರಪನಹಳ್ಳಿ ಪಟ್ಟಣದಲ್ಲಿ ಏ.28 ರಂದು ಡಾ.ಬಾಬುಜಗಜೀವನ್‌ರಾಂ ಭವನದಲ್ಲಿ ಬೆ.10 ಗಂಟೆಗೆ ತಾಲೂಕು ಮಟ್ಟದ ಜನಸ್ಪಂದನಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದ್ದು, ಹರಪನಹಳ್ಳಿ ಶಾಸಕರಾದ ಲತಾ ಮಲ್ಲಿಕಾರ್ಜುನ ರವರು ಅಧ್ಯಕ್ಷತೆ ವಹಿಸಲಿದ್ದಾರೆ. ಜನ ಸ್ಪಂದನಾ ಕಾರ್ಯಕ್ರಮದಲ್ಲಿ ಸಾರ್ವಜನಿಕರು ತಮ್ಮ ಅಹವಾಲುಗಳನ್ನು ಸಲ್ಲಿಸಬಹುದು. ಎಲ್ಲಾ ಜಿಲ್ಲಾ ಮಟ್ಟದ ಅಧಿಕಾರಿಗಳು ಕಡ್ಡಾಯ ವಾಗಿ ಹಾಜರಾಗುವಂತೆ ಜಿಲ್ಲಾಧಿಕಾರಿ ಎಂ.ಎಸ್. ದಿವಾಕರ್ ನಿರ್ದೇಶಿಸಿದ್ದಾರೆ.

# ಹೊಸಪೇಟೆ-ಮಂಗಳೂರು ರೈಲು ಸಂಚಾರ ಆರಂಭಿಸಿ

## ವಾಣಿಜ್ಯ ವೃದ್ಧಿಗೆ ರದ್ದಾದ ರೈಲುಗಳನ್ನು ಪುನರಾರಂಭಿಲು ಸಂಸದ ತುಕಾರಂಗೆ ಮನವಿ ರೈಲು ಸಂಚಾರದಿಂದ ಪ್ರವಾಸೋದ್ಯಮ ಚೇತರಿಕೆ, ಧಾರ್ಮಿಕ ಕ್ಷೇತ್ರಗಳ ದರ್ಶನ ಭಾಗ್ಯ



**ಹಂಪಿ ಟೈಮ್ಸ್ ಹೊಸಪೇಟೆ**
ನೈರುತ್ಯರೈಲ್ವೆ ವಲಯ ರೈಲ್ವೆ ಬಳಕೆದಾರರ ಸಲಹಾ ಸಮಿತಿ ಹಿರಿಯ ಸದಸ್ಯ ಬಾಬುಲಾಲ್ ಜೈನ್‌ರವರ ನೇತೃತ್ವದಲ್ಲಿ ವಿಜಯನಗರ ರೈಲು ಬಳಕೆದಾರರ ಸಂಘದ ಪದಾಧಿಕಾರಿಗಳು ಮಂಗಳ ವಾರ ನಗರದ ಪ್ರವಾಸಿ ಮಂದಿರದಲ್ಲಿ ಸಂಸದ ಈ.ತುಕರಾಂ ಅವರಿಗೆ ರೈಲ್ವೆ ಬೇಡಿಕೆಗಳ ಮನವಿ ಪತ್ರ ಸಲ್ಲಿಸಿದರು.

ಬಳ್ಳಾರಿ–ಹೊಸಪೇಟೆ–ಕೊಟ್ಟೂರು ಮಾರ್ಗ ವಾಗಿ ಬಂದರು ನಗರ ಮಂಗಳೂರಿಗೆ ನೇರ ರೈಲ್ವೆ ಸಂಪರ್ಕ ಕಲ್ಪಿಸಬೇಕು. ಇದರಿಂದ ರಾಜ್ಯದ ಎರಡು ವಿಶ್ವಪಾರಂಪರಿಕ ತಾಣಗಳಾದ ಹಂಪಿ ಮತ್ತು ಬೇಲೂರು ಹಳೆಬೀಡುಗಳ ನಡುವೆ ರೈಲ್ವೆ ಸಂಪರ್ಕ ದೊರೆಯುತ್ತದೆ. ಧಾರ್ಮಿಕ ಕೇಂದ್ರಗಳಾದ ಧರ್ಮಸ್ಥಳ, ಕುಕ್ಕೆಸುಬ್ರಮಣ್ಯ, ಶ್ರವಣ ಬೆಳಗೋಳ ಹಾಗೂ ಶೈಕ್ಷಣಿಕ, ಬೃಹತ್ ಆಸ್ಪತ್ರೆ ಕೇಂದ್ರಗಳಾದ ಮಣಿಪಾಲ, ಉಡುಪಿ, ಮಂಗಳೂರಿಗೆ ಸಂಪರ್ಕದಿಂದ ಅನುಕೂಲವಾಗಿದೆ. ಕರಾವಳಿ, ಮಲೆನಾಡು ಜಿಲ್ಲೆಗಳಿಂದ ಕಲ್ಯಾಣ ಕರ್ನಾಟಕದ ಜಿಲ್ಲೆಗಳ ನಡುವೆ ವ್ಯಾಪಾರ ವಾಣಿಜ್ಯ ಚಟುವಟಿಕೆಗಳು ವೃದ್ಧಿಯಾಗುತ್ತದೆ. ವಿಶೇಷವಾಗಿ ಪ್ರವಾಸೋದ್ಯಮ ಆರ್ಥಿಕ ಚಟುವಟಿಕೆಗಳ ಬೆಳವಣಿಗೆಗಳ ದೃಷ್ಟಿಯಿಂದ ಬಳ್ಳಾರಿ ಮತ್ತು ಮಂಗಳೂರು ನಡುವೆ ನೇರ ರೈಲು ತುರ್ತಾಗಿ ಆಂರಭಿಸಲು ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿದರು.

ಕಳೆದ ನಾಲ್ಕು ತಿಂಗಳಿಂದ ಸಂಚಾರ ರದ್ದಾಗಿರುವ ಬೆಳಗಾವಿ–ಹೊಸಪೇಟೆ–ಹೈದ್ರಬಾದ್–ಮಣಗೂರು ಗಾಡಿ ಸಂಖ್ಯೆ : 07335/07336 ಕೂಡಲೇ ಪುನರ್ ಆರಂಭಿಸಬೇಕು. ಹೊಸಪೇಟೆ–ಮುಂಬೈ ಗಾಡಿ ಸಂಖ್ಯೆ :11139/11140 ರೈಲಿನ ಹಳೇ ಕೋಚ್‌ಗಳ ಬದಲಾಗಿ ಆಧುನಿಕ ಸೌಲಭ್ಯವುಳ್ಳ ನೂತನ LHB ಕೋಚ್‌ಗಳನ್ನು ಅಳವಡಿಸಬೇಕು ಹಾಗೂ ಬಳ್ಳಾರಿ, ವಿಜಯನಗರ, ಕೊಪ್ಪಳ ಜಿಲ್ಲೆಗಳಿಂದ ಮುಂಬೈಗೆ ಹೋಗುವ ಪ್ರಯಾಣಿಕರಿಗೆ ಹೆಚ್ಚುವರಿ ಬರ್ತ್ ಸೌಲಭ್ಯ ಕಲ್ಪಿಸಬೇಕು. ಹೊಸಪೇಟೆ ರೈಲ್ವೆ ನಿಲ್ದಾಣವನ್ನು ಮೇಲ್ದರ್ಜೆಗೇರಿಸಬೇಕು. ಮತ್ತು ರೈಲುಗಳು ಸಕಾಲದಲ್ಲಿ ಬಂದು ಹೋಗಲು ಅನುಕೂಲವಾಗುವಂತೆ 02 ನೂತನ ಪ್ಲಾಟ್‌ಫಾರಂಗಳನ್ನು ನಿರ್ಮಿಸಿ ಪ್ರಯಾಣೀಕರಿಗೆ ಮೂಲ ಸೌಲಭ್ಯಗಳನ್ನು ಕಲ್ಪಿಸಬೇಕು. ಹೊಸಪೇಟೆ – ಗುಂತಕಲ್ ಮಾರ್ಗವಾಗಿ ವಾರಕ್ಕೆ ಎರಡು ಬಾರಿ ಸಂಚರಿಸುತ್ತಿರುವ ಹುಬ್ಬಳ್ಳಿ–ಚನ್ನೈ ಗಾಡಿ ಸಂಖ್ಯೆ : 17313 / 17314 ದಿನವಹಿ ರೈಲಾಗಿ ಸಂಚರಿಸುವಂತೆ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ಹುಡಾ ಅಧ್ಯಕ್ಷ ಇಮಾಮ್ ನಿಯಾಜಿ, ಮುಖಂಡರಾದ ವೈ.ಯಮುನೇಶ್, ಮಹೇಶ್ ಕುಡುತಿನಿ, ಗುಜ್ಜಲ್ ನಾಗರಾಜ್, ಪ್ರೋ॥ ಉಮಾಮಹೇಶ್ವರ್, ವಕೀಲ್ ಹೆಚ್.ಮಹೇಶ್ ಇತರರಿದ್ದರು.

# ಕಾಶ್ಮೀರದ ಪಹಲ್ಗಾಮ್‌ನ ಉಗ್ರರ ದಾಳಿ, ಸರ್ಕಾರದಿಂದ ಕನ್ನಡಿಗರನ್ನು ಸುರಕ್ಷಿತವಾಗಿ ಕರೆತರಲು ಸಕಲ ವ್ಯವಸ್ಥೆ : ಸಿಎಂ ಸಿದ್ದರಾಮಯ್ಯ

**ಹಂಪಿ ಟೈಮ್ಸ್ ಬೆಂಗಳೂರು**
ಕಾಶ್ಮೀರದ ಪಹಲ್ಗಾಮ್ ನ ಉಗ್ರರ ದಾಳಿಯ ಸಂದರ್ಭದಲ್ಲಿ ಕಾಶ್ಮೀರದಿಂದ ಕನ್ನಡಿಗರನ್ನು ಸುರಕ್ಷಿತವಾಗಿ ಕರೆತರಲು ಸರ್ಕಾರ



ಸಕಲ ವ್ಯವಸ್ಥೆ ಮಾಡಲಾಗಿದೆ ಹಾಗೂ ಉಗ್ರರ ದಾಳಿಯ ಮಾಹಿತಿ ಕೊರತೆ ಕೇಂದ್ರದ ಗುಪ್ತಚರ ಇಲಾಖೆಯ ವೈಫಲ್ಯವಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಬುಧವಾರ ಮಾಧ್ಯಮದವರೊಂದಿಗೆ ಮಾತನಾಡಿ ಕನ್ನಡಿಗರನ್ನು ಕರೆತರಲು ಕಾರ್ಮಿಕ ಸಚಿವರಿಗೆ ಸೂಚನೆ ನೀಡಲಾಗಿದೆ. ಕಾಶ್ಮೀರದಲ್ಲಿ ಪ್ರವಾಸಿಗರ ಮೇಲೆ ನಡೆದಿರುವ ಉಗ್ರರ ದಾಳಿಯನ್ನು ತೀವ್ರವಾಗಿ ಖಂಡಿಸುತ್ತೇನೆ.ವ ಕರ್ನಾಟಕದ ಪ್ರವಾಸಿಗರಲ್ಲಿ ಮಂಜುನಾಥ್ ಹಾಗೂ ಭರತ್ ಭೂಷಣ್ ಎಂಬುವರು ಮೃತರಾಗಿರುವ ಬಗ್ಗೆ ಮಾಹಿತಿ ಬಂದಿದೆ. ಕನ್ನಡಿಗರ ರಕ್ಷಣೆ ಹಾಗೂ ಇನ್ನಿತರ ವ್ಯವಸ್ಥೆಗಳಿಗಾಗಿ ಅಧಿಕಾರಿಗಳ ತಂಡವನ್ನು ಕಾಶ್ಮೀರಕ್ಕೆ ರವಾನಿಸಲಾಗಿದೆ. ಅಲ್ಲದೇ, ಕಾಶ್ಮೀರಕ್ಕೆ ತೆರಳಿರುವ 40 ಕ್ಕೂ ಅಧಿಕ ಕನ್ನಡಿಗರನ್ನು ವಿಶೇಷ ವಿಮಾನ ವ್ಯವಸ್ಥೆ ಮಾಡಿ ಸುರಕ್ಷಿತವಾಗಿ ಕರೆತರಲು ಕಾರ್ಮಿಕ ಸಚಿವ ಸಂತೋಷ್ ಲಾಡ್ ಅವರನ್ನೂ ಕಾಶ್ಮೀರಕ್ಕೆ ಕಳಿಸಲಾಗಿದೆ ಎಂದರು.

ಕಾಶ್ಮೀರದ ಪಹಲ್ಗಾಮ್ ನಡೆದಿರುವ ಉಗ್ರರ ದಾಳಿ ಪೂರ್ವಯೋಜಿತ ಸಂಚು. ಪ್ರಾಣಹತ್ಯೆ ಮಾಡಿರುವ ಈ ಘಟನೆ ಅತ್ಯಂತ ಖಂಡನೀಯ. ಘಟನೆಯಲ್ಲಿ ಸುಮಾರು 28 ಜನ ಮೃತಪಟ್ಟಿರುವ ಭೀಕರವಾದ ಉಗ್ರರ ದಾಳಿ ನಡೆಯುವ ಮಾಹಿತಿ ಮೊದಲೇ ತಿಳಿಯದಿರುವುದು ಕೇಂದ್ರದ ಗುಪ್ತಚರ ಇಲಾಖೆಯ ವೈಫಲ್ಯವಾಗಿದೆ. ಈ ಹಿಂದೆ ನಡೆದ ಪುಲ್ವಾಮಾ ಘಟನೆಯಲ್ಲಿ ಗುಪ್ತಚರ ಮಾಹಿತಿಯ ವೈಫಲ್ಯವಿದೆ ಎಂದರು.

ದೇಶದ ಜನರಿಗೆ ಕೇಂದ್ರ ಭದ್ರತೆ ಒದಗಿಸಬೇಕು: ಮೃತರ ಕುಟುಂಬಗಳಿಗೆ ಪರಿಹಾರ ನೀಡುವ ಬಗ್ಗೆ ಸರ್ಕಾರ, ಸಕಾರಾತ್ಮಕವಾಗಿ ಚಿಂತಿಸಿ ಪರಿಶೀಲಿಸಲಿದೆ. ಪೆಹಲ್ಗಾಮಿನ ಉಗ್ರರ ದಾಳಿ ಪ್ರಕರಣದಲ್ಲಿ ಕೇಂದ್ರ ಗುಪ್ತಚರ ಇಲಾಖೆ ವಿಫಲವಾಗಿದೆ. ಭಯೋತ್ಪಾದಕರನ್ನು ನಿರ್ಮೂಲನೆಗೊಳಿಸುವ ಜೊತೆಗೆ ದೇಶದ ಜನರಿಗೆ ಭದ್ರತೆ ನೀಡುವ ಕಾರ್ಯವನ್ನು ಕೇಂದ್ರ ಸಮರ್ಥವಾಗಿ ನಿರ್ವಹಿಸಬೇಕು ಎಂದು ಮುಖ್ಯಮಂತ್ರಿ ಅಭಿಪ್ರಾಯಪಟ್ಟರು.

# ಇಂದಿನಿಂದ ದ್ವಿತೀಯ ಪಿಯುಸಿ 2ನೇ ಪರೀಕ್ಷೆ ಆರಂಭ

## ಜಿಲ್ಲಾದ್ಯಂತ 8 ಪರೀಕ್ಷಾ ಕೇಂದ್ರಗಳು | ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ಹೇಳಿಕೆ

**ಹಂಪಿ ಟೈಮ್ಸ್ ಹೊಸಪೇಟೆ**
ಜಿಲ್ಲೆಯಲ್ಲಿ ಏ.24 ರಿಂದ ಮೇ.8 ರವರೆಗೆ



ಒಟ್ಟು 8 ಪರೀಕ್ಷಾ ಕೇಂದ್ರಗಳಲ್ಲಿ 2ನೇ ದ್ವಿತೀಯ ಪಿಯುಸಿ ಪರೀಕ್ಷೆಗಳು ಆರಂಭ ವಾಗಲಿವೆ ಎಂದು ಜಿಲ್ಲಾಧಿಕಾರಿ ಎಂ.ಎಸ್. ದಿವಾಕರ್ ತಿಳಿಸಿದ್ದಾರೆ.

ಜಿಲ್ಲೆಯ ಹೊಸಪೇಟೆ, ಹಡಗಲಿ, ಹಗರಿಬೊಮ್ಮನಹಳ್ಳಿ, ಹರಪನಹಳ್ಳಿ, ಕೂಡ್ಲಿಗಿ, ಮತ್ತು ಕೊಟ್ಟೂರು ತಾಲೂಕು ಸೇರಿದಂತೆ ಒಟ್ಟು 8 ಪರೀಕ್ಷಾ ಕೇಂದ್ರಗಳಲ್ಲಿ ದ್ವಿತೀಯ ಪಿಯುಸಿ ಪರೀಕ್ಷೆಗಳು ನಡೆಯ ಲಿದ್ದು, ಎಲ್ಲಾ ಪರೀಕ್ಷಾ ಕೇಂದ್ರಗಳಿಗೆ ಒಬ್ಬ ಅಧಿಕಾರಿಯನ್ನು ವೀಕ್ಷಕರನ್ನಾಗಿ ನೇಮಿಸಲಾಗಿದೆ. ಪರೀಕ್ಷೆಗಳು ಸುಗಮ ಹಾಗೂ ಸುವ್ಯವಸ್ಥಿತವಾಗಿ ನಡೆ ಸಲು ಅಗತ್ಯ ಪೂರ್ವಸಿದ್ಧತೆಗಳನ್ನು ಕೈಗೊಳ್ಳು ವಂತೆ ಹಾಗೂ ಪರೀಕ್ಷಾ ವೇಳಾ ಪಟ್ಟಿಯಂತೆ ಕೇಂದ್ರ ದಲ್ಲಿ ಮೂಲಭೂತ ಸೌಕರ್ಯಗಳಾದ ಆಸನ ವ್ಯವಸ್ಥೆ, ಕುಡಿಯುವ ನೀರು, ಗಾಳಿ ಮತ್ತು ಬೆಳಕಿನ ವ್ಯವಸ್ಥೆ ಮಾಡಲು ಅಗತ್ಯ ಕ್ರಮ ವಹಿಸಬೇಕಿದೆ. ನೇಮಕವಾದ ವೀಕ್ಷಕರು ಪ್ರತಿ ಪರೀಕ್ಷಾ ಕೇಂದ್ರಗಳಿಗೆ ಭೇಟಿ ನೀಡಿ ಪೂರ್ವಸಿದ್ಧತೆಗಳನ್ನು ಪರಿಶೀಲಿಸಿ, ಪರೀಕ್ಷಾ ದಿನದಂದು ವಿದ್ಯಾರ್ಥಿಗಳ ನೋಂದಾಣಿ, ಹಾಜರಿ ಮತ್ತು ಗೈರು ಹಾಜರಿಯ ಕುರಿತು ವರದಿ ಸಲ್ಲಿಸಬೇಕು. ಯಾವುದೇ ರೀತಿಯ ಅಹಿತಕರ ಘಟನೆಗಳು ಜರುಗದಂತೆ ನಿಗಾ ವಹಿಸಬೇಕು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಭಾವೈಕ್ಯತೆಗೆ ಸಾಕ್ಷಿ ಗುಳೆ ಲಕ್ಕಮ್ಮ ದೇವಿ ಜಾತ್ರೆ

## ಮುಸ್ಲಿಂರಿಂದ ಮಾಂಸಹಾರ ಸೇವನೆ ಸ್ವಯಂ ನಿಷೇಧ | ಊರು ಕಾಯುವ ಜವಾಬ್ದಾರಿಯೂ ಮುಸ್ಲಿಂರದ್ದೇ





**ಹಂಪಿ ಟೈಮ್ಸ್ ಕೂಡ್ಲಿಗಿ**
ಪಟ್ಟಣದಲ್ಲಿ ಭಾವೈಕತೆ ಸಾರುವ ಗುಳೆ ಲಕ್ಕಮ್ಮನ ಜಾತ್ರೆ ಬುಧವಾರ ಅತ್ಯಂತ ಸಡಗರ, ಸಂಭ್ರಮದಿಂದ ನಡೆಯಿತು. ಜನ, ಜಾನುವಾರುಗಳು ಕ್ಷೇಮ ಆರೋಗ್ಯಕ್ಕಾಗಿ ಮೂರು ವರ್ಷಕ್ಕೊಮ್ಮೆ ನಡೆಯುವ ಜಾತ್ರೆ ಸಾವಿರಾರು ಭಕ್ತರ ಹರ್ಷೋದ್ಗಾರದಲ್ಲಿ ವೈಭದಿಂದ ಸಂಪನ್ನವಾಯಿತು. ಬುಧ ವಾರ ಬೆಳಗಿನ ಜಾವದಿಂದಲೇ ಭಕ್ತರು ಗುಳೆ ಲಕ್ಕಮ್ಮ ದೇವಿಗೆ ಪಟ್ಟಣದ ಪ್ರತಿ ಮನೆಯಿಂದ ಉಡಿ ಅಕ್ಕಿ, ಹೂ, ಹಣ್ಣುಗಳನ್ನು ಅರ್ಪಿಸಿದದರು. ಬೆಳಿಗ್ಗೆ 8:30 ಕ್ಕೆ ಆಯಾಗಾರರು ಗುಳೆ ಲಕ್ಕಮ್ಮನ ದೇವಿ ಮುಂಭಾಗದಲ್ಲಿ ಹುಂಡಿ ಹಣ ಎಣಿಕೆ ಮಾಡಿ ಸುಮಾರು ಎರಡು ಲಕ್ಷಕ್ಕೂ ಹೆಚ್ಚು ಹಣವನ್ನು ಪಟ್ಟಣದ ವೀರನಗೌಡ ಅವರಿಗೆ ನೀಡಿದರು. ನಂತರ ಹಿ.ಮ.ಚಿದಾನಂದ ಸ್ವಾಮಿ ನೇತೃತ್ವದಲ್ಲಿ ಗುಳೆ ಲಕ್ಕಮ್ಮ ದೇವಿಗೆ ಮಹಾ ಮಂಗಳಾರತಿ ನಂತರ ಅರ್ಚಕರಿಗೆ ದೇವಿ ಚಟ್ಟವನ್ನು ತಲೆಮೇಲೆ ಪ್ರತಿಷ್ಠಾನ ಮಾಡಿದರು. ಕೂಡಲೇ ದೇವಿಹೊತ್ತು ಅರ್ಚಕ ವಾದ್ಯ, ಮೇಳಗಳೊಂದಿಗೆ ಮೆರವಣಿಗೆ ಮೂಲಕ ಗ್ರಾಮ ದೇವತೆ ಊರಮ್ಮ ದೇವಸ್ಥಾನದಲ್ಲಿ ಬಂದು ದರ್ಶನ ಮಾಡಿ ಒಂದು ಸುತ್ತು ದೇವಸ್ಥಾನ ಪ್ರದಕ್ಷಿಣೆ ಹಾಕಿ ಅಂಬೇಡ್ಕರ್ ಕಾಲನಿಗೆ ಹೋಯಿತು. ಅಂಬೇಡ್ಕರ್ ಕಾಲನಿ ನಿವಾಸಿಗಳು ತಮ್ಮ ಅಡುಗೆ ಸಾಮಾಗ್ರಿಗಳನ್ನು ಹೊತ್ತು ಸೀದಾ ಹೊಸಪೇಟೆ ರಸ್ತೆಯಲ್ಲಿ ಬಂದು ನಿಂತರು. ಲಕ್ಕಮ್ಮ ದೇವಿ ಪಟ್ಟಣ ಖಾಲಿಯಾಗಿದೆ ಎಂದು ಖಾತ್ರಿ ಪಡೆಯಲು ಪಟ್ಟಣದ ವಿವಿಧ ಕಡೆ ಮೆರವಣಿಗೆ ಮೂಲಕ ತೆರಳಿ ಎಲ್ಲರೂ ಊರು ಬಿಟ್ಟು ಹೋದರೆಂದು ತಳವಾರ ಹೇಳಿದ ನಂತರ ಪಟ್ಟಣದ ಆಂಜನೇಯ ದೇವಸ್ಥಾನದ ಮೂಲಕ ಊರಿನ ದ್ವಾರ ಭಾಗಿಲಿಗೆ ಬಂದು ಅಲ್ಲಿಂದ ಸೀದಾ ಮೆರವಣಿಗೆ ಮೂಲಕ ಭಕ್ತರು ದೇವಿಯನ್ನು ವಾದ್ಯಗಳ ಮೂಲಕ ಕುಣಿಯುತ್ತ ನಡೆದರು. ಮುಸ್ಲಿಂ ಸಮುದಾಯಕ್ಕೆ ಸೇರಿದ ಮಣೆಗಾರ ದೇವಿ ಪಟ್ಟಣ ತೊರೆದ ನಂತರ ದ್ವಾರ ಬಾಗಿಲಿಗೆ ಬೇಲಿಹಾಕಿ ಊರ ಕಾಯುವ ಜವಾಬ್ದಾರಿ ತಗೆದುಕೊಂಡನು.

> ಕಳೆದ ಆರು ತಲೆಮಾರುಗಳಿಂದ ಮುಸ್ಲಿಂ ಜನಾಂಗದ ನಾವು ಜಾತ್ರೆಯ ಸಂಧರ್ಭದಲ್ಲಿ ಊರ ಕಾಯುವ ಜವಾಬ್ದಾರಿಯನ್ನು ಹೊತ್ತಿದ್ದೇವೆ. ಈ ವೇಳೆ ನಾವು ಒಂದು ವಾರ ಮಾಂಸಾಹಾರ ಮಾಡುವುದಿಲ್ಲ, ಜಾತ್ರೆಯ ದಿನ ನಾನು ಉಪವಾಸದಿಂದ ದೇವಿಗೆ ಉಡಿಅಕ್ಕಿ, ಹೂ,ಹಣ್ಣು ಅರ್ಪಿಸಿ ಸಂಜೆ ದೇವಿ ಪಟ್ಟಣ ಪ್ರವೇಶದ ನಂತರ ಕೈಮುಗಿದು ಮನೆಗೆ ಹೋಗಿ ಊಟ ಮಾಡುವುದು ಅನೂಚಾನವಾಗಿ ನಡೆದುಬಂದಿದೆ.
>
> – ಮಣೆಗಾರ ಅಮೀರ್
> ಗ್ರಾಮದ ಮಣೆಗಾರ, ಕೂಡ್ಲಿಗಿ.

ಭಕ್ತರು ದಾರಿಯುದ್ದಕ್ಕೂ ದೇವಿಗೆ ಹೂ,ಹಣ್ಣು, ಕಾಯಿ ಸಮರ್ಪಿಸಿದರು. ಗೋವಿಂದ ಗಿರಿ ಗ್ರಾಮದ ಬಳಿಯಿರುವ ಗುಳೆ ಲಕ್ಕಮ್ಮನ ಮರದ ಬಳಿ ಗುಳೆ >>3




# ಅಪ್ರಾಪ್ತ ವಯಸ್ಸಿನ ಮಗಳ ಮೇಲೆ ಅತ್ಯಾಚಾರ ಎಸಗಿದ ನೀಚ ತಂದೆಗೆ ಜೀವಾವಧಿ ಶಿಕ್ಷೆ

■ **ಹಂಪಿ ಟೈಮ್ಸ್ ಕೊಪ್ಪಳ**

ಅಪ್ರಾಪ್ತ ವಯಸ್ಸಿನ ಮಗಳ ಮೇಲೆ ಅತ್ಯಾಚಾರ ಮಾಡಿದ ಬಾಲಕಿಯ ತಂದೆಗೆ ಜೀವಾವಧಿ ಜೈಲು ಶಿಕ್ಷೆ ಹಾಗೂ ರೂ. 80,000 ಗಳ ದಂಡವನ್ನು ಕೊಪ್ಪಳ ಹೆಚ್ಚುವರಿ ಜಿಲ್ಲಾ ಹಾಗೂ ಸತ್ರ ನ್ಯಾಯಾಧೀಶರು ಹಾಗೂ ತ್ವರಿತ ವಿಲೇವಾರಿ (ಪೋಕ್ಸೊ) ನ್ಯಾಯಾಲಯವು ವಿಧಿಸಿದೆ.

ಕೊಪ್ಪಳ ಗ್ರಾಮೀಣ ಪೊಲೀಸ್ ಠಾಣೆ ವ್ಯಾಪ್ತಿಯ ನಿವಾಸಿ ಯಂಕಪ್ಪ ತಂದೆ ಕ್ಯಾರ ಹನುಮಂತ ಗೊಲ್ಲರ ಈತನು ಸುಮಾರು 1 ವರ್ಷದ ಹಿಂದೆ ತನ್ನ ಅಪ್ರಾಪ್ತ ವಯಸ್ಸಿನ ಮಗಳಿಗೆ ದನ ಮೇಯಿಸಲು ಗುಡ್ಡಕ್ಕೆ ಕರೆದುಕೊಂಡು ಹೋದ ಸಮಯದಲ್ಲಿ ಕುಡಿದ ಅಮಲಿನಲ್ಲಿ ಹೆದರಿಸಿ ಮಗಳ ಮೇಲೆ ಅತ್ಯಾಚಾರ ಮಾಡಿ, ವಿಷಯವನ್ನು ಯಾರಿಗಾದರೂ ಹೇಳಿದರೆ ಸಾಯಿಸುವುದಾಗಿ ಹೆದರಿಸಿದ್ದಾನೆ. ನಂತರದಲ್ಲಿ ಬಾಧಿತಳಿಗೆ ಹೊಟ್ಟೆ ನೋವು ಕಾಣಿಸಿದ್ದರಿಂದ ಗಂಗಾವತಿಯ ಸಿ.ಟಿ ಆಸ್ಪತ್ರೆಗೆ ಚಿಕಿತ್ಸೆಗಾಗಿ ಸೇರಿಸಿದಾಗ ಬಾಧಿತಳಿಗೆ ಗಂಡು ಮಗು ಜನಿಸಿರುತ್ತದೆ. ಈ ಆರೋಪದ ಹಿನ್ನೆಲೆಯಲ್ಲಿ ಕೊಪ್ಪಳ ಗ್ರಾಮೀಣ ಪೋಲಿಸರು ದೂರು ಸ್ವೀಕರಿಸಿ, ಅಂದಿನ ಪಿಎಸ್ಐ ಸುರೇಶ ಡಿ. ಅವರು ಈ ಪ್ರಕರಣದ ಪ್ರಥಮ ಹಂತದ ತನಿಖೆಯನ್ನು ನಿರ್ವಹಿಸಿ ಮುಂದಿನ ತನಿಖೆಯನ್ನು ಅಂದಿನ ಕೊಪ್ಪಳ ಸಿಪಿಐ ರವಿ ಉಕ್ಕುಂದ ಅವರು ನಿರ್ವಹಿಸಿ, ಆರೋಪಿತನ ವಿರುದ್ಧ ನ್ಯಾಯಾಲಯಕ್ಕೆ ದೋಷಾರೋಪಣೆ ಪಟ್ಟಿ ಸಲ್ಲಿಸಿದ್ದರು.

ಈ ಪ್ರಕರಣವು ಕೊಪ್ಪಳ ಹೆಚ್ಚುವರಿ ಜಿಲ್ಲಾ ಹಾಗೂ ಸತ್ರ ನ್ಯಾಯಾಧೀಶರು ಹಾಗೂ ತ್ವರಿತ ವಿಲೇವಾರಿ (ಪೋಕ್ಸೊ) ನ್ಯಾಯಾಲಯ ಸ್ಪೆ. ಎಸ್‌ಸಿ(ಪೋಕ್ಸೊ) ಸಂ: 38/2020ರಲ್ಲಿ ದಾಖಲಾಗಿದ್ದು, ವಿಚಾರಣೆಯನ್ನು ನಡೆಸಿದ ನ್ಯಾಯಾಲಯ ಆರೋಪಿ ಯಂಕಪ್ಪ ತಂದೆ ಕ್ಯಾರ ಹನುಮಂತಗೊಲ್ಲರ ಈತನ ಮೇಲಿನ ಆರೋಪಣೆಗಳು ಸಾಭೀತಾಗಿದ್ದರಿಂದ ಆರೋಪಿಗೆ ಜೀವಾವಧಿ ಜೈಲು ಶಿಕ್ಷೆ ಹಾಗೂ ರೂ. 80,000 ಗಳ ದಂಡವನ್ನು ಭರಿಸುವಂತೆ ಆದೇಶಿಸಿ ಹೆಚ್ಚುವರಿ ಜಿಲ್ಲಾ ಹಾಗೂ ಸತ್ರ ನ್ಯಾಯಾಧೀಶರು ಹಾಗೂ ತ್ವರಿತ ವಿಲೇವಾರಿ (ಪೋಕ್ಸೊ) ನ್ಯಾಯಾಲಯದ ನ್ಯಾಯಾಧೀಶರಾದ ಕುಮಾರ ಡಿ.ಕೆ. ಅವರು ಏ.17 ಗುರುವಾರ ರಂದು ತೀರ್ಪು ಹೊರಡಿಸಿರುತ್ತಾರೆ. ಸರ್ಕಾರದ ಪರವಾಗಿ ವಿಶೇಷ ಸರ್ಕಾರಿ ಅಭಿಯೋಜಕರಾದ ಗೌರಮ್ಮ ಎಲ್. ದೇಸಾಯಿ ಅವರು ಈ ಪ್ರಕರಣ ನಡೆಸಿ ವಾದ ಮಂಡಿಸಿದ್ದರು. ಕೊಪ್ಪಳ ಗ್ರಾಮೀಣ ಪೊಲೀಸ್ ಠಾಣೆಯ ಸಿಬ್ಬಂದಿ ಎನ್.ಮಂಜುನಾಥ ಸಿಪಿಸಿ–558 ಇವರು ಸಕಾಲಕ್ಕೆ ಸಾಕ್ಷಿದಾರರನ್ನು ನ್ಯಾಯಾಲಯದ ಮುಂದೆ ಹಾಜರಪಡಿಸುವಲ್ಲಿ ಸಹಕರಿಸಿರುತ್ತಾರೆ ಎಂದು ಹೆಚ್ಚುವರಿ ಜಿಲ್ಲಾ ಹಾಗೂ ಸತ್ರ ನ್ಯಾಯಾಲಯದ ವಿಶೇಷ ಸರ್ಕಾರಿ ಅಭಿಯೋಜಕರ (ಪೋಕ್ಸೊ) ಕಾರ್ಯಾಲಯದ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ದುಡುಕುವ ಮುನ್ನ ಅರಿವಿನ ಬೀಜ ಬಿತ್ತಿ ಹೇಳುವ ಮುಂಚೆ ಪಾಲನೆಯೂ ಇರಲಿ

**ಘಟನೆ–1:** ಅವಳು ಹದಿನಾರರ ವಯಸ್ಸಿನ ಹುಡುಗಿ. ಅದೇ ತಾನೇ ಕಾಲೇಜಿಗೆ ಸೇರಿದ್ದಳು. ಅಲ್ಲಿ ಒಬ್ಬನನ್ನು ಪ್ರೀತಿಸಿದಳು. ಓದುವದನ್ನು ಬಿಟ್ಟುಪಾರ್ಕ,ಸಿನೆಮಾ,ಹೋಟೆಲ್ ಅಂತೆಲ್ಲಾಅಲೆದಾಡತೊಡಗಿದಳು. ಅವಳಪ್ಪನಿಗೆ ವಿಷಯ ಗೊತ್ತಾಗಿ ಬುದ್ಧಿವಾದ ಹೇಳಿದ. ತೀರಾ ಕಟ್ಟುನಿಟ್ಟು ವಿಧಿಸಿದ. ಕೊನೆಗೊಂದು ದಿನ ಪ್ರಿಯಕರನೊಂದಿಗೆ ಸೇರಿಕೊಂಡು ತಂದೆಯನ್ನೇ ಕೊಂದು ಬಿಟ್ಟಳು.

**ಘಟನೆ–2:** ಅದೊಂದು ಬಡತನದ ಕುಟುಂಬ. ಗಂಡ ಕುಡಿದು ಅಲೆಯುತಿದ್ದಾನೆ. ಹೆಂಡತಿ ಕೂಲಿನಾಲಿ ಮಾಡಿಕೊಂಡು ಸಂಸಾರ ನಿರ್ವಹಣೆ ಮಾಡುತಿದ್ದಳು. ಹರೆಯಕ್ಕೆ ಬಂದ ಮಗಳೊಬ್ಬಳು ಮನೆಯಲ್ಲಿದ್ದಳು. ಹೆಂಡತಿ ಕೂಲಿಗೆಂದು ಹೊರಹೋದಾಗ ಮನೆಗೆ ಬರುತಿದ್ದ ಗಂಡ ಕುಡಿದ ಅಮಲಿನಲ್ಲಿ ಮಗಳ ಮೇಲೆಯೇ ಅತ್ಯಾಚಾರ ಎಸಗಿದ. ಬಾಯಿ ಬಿಟ್ಟರೆ ಎಲ್ಲರನ್ನೂ ಕೊಲೆ ಮಾಡುವದಾಗಿ ಬೆದರಿಕೆ ಹಾಕಿದ. ಕೊನೆಗೆ ಆ ಯುವತಿ ಗರ್ಭಿಣಿ ಆದ ವಿಷಯ ಗೊತ್ತಾದಾಗಲೇ ತಂದೆಯ ನೀಚ ಕೃತ್ಯ ಬಯಲಾದದ್ದು.



ಭೋಜರಾಜ ಸೊಪ್ಪಿಮಠ
9743388911

ಮೇಲಿನ ಎರಡು ಘಟನೆಗಳು ಆಗಾಗ್ಗೆ ಪುನರಾವರ್ತನೆ ಆಗುತಿರುತ್ತವೆ. ತುಂಬಾ ದಿನಗಳಿಂದ ಕಾಯ್ದುಕೊಂಡು ಬಂದಿದ್ದ ಮಾನವೀಯ ಸಂಬಂಧಗಳು ಗಟ್ಟಿಗೊಳ್ಳದೇ ಆತಂಕ ಗೊಳ್ಳುವಂತೆ ಬದಲಾವಣೆಗೆ ಒಳಪಡುತ್ತವೆ. ಇತ್ತೀಚಿಗೆ ಬಂದ ಮೊಬೈಲ್ ನಿಂದಲೂ ಮನುಷ್ಯ ಸಂಬಂಧದ ಕೊಂಡಿಯಾದ ಪ್ರೀತಿ, ಮಮತೆ, ಭ್ರಾತೃತ್ವ ಅಳಿದು ಹೋಗುತ್ತವೆ.

ಭಾರತ ನೆಲದ ಸಂಸ್ಕೃತಿಯೇ ಅಂತಹದ್ದು. ತಂದೆ, ತಾಯಿ ದೇವರೆಂದು ಪೂಜಿಸುತ್ತೇವೆ. ಮಗಳಲ್ಲಿ ಅಮ್ಮನ ಸ್ವರೂಪ ಕಾಣುತ್ತೇವೆ. ಇವೆಲ್ಲವನ್ನೂ ಮೀರಿ ಕ್ಷಣಿಕದಾಸೆಗೆ ಒತ್ತು ಕೊಡುವಂತೆ ಮನೋವಿಕಾರ ಹೊಂದುತ್ತಿದೆ. ಮನೆಯಲ್ಲಿ ಹೇಳಿಕೊಟ್ಟ ನೀತಿ ನಯಮ ಮೌಲ್ಯಗಳ ಪಾಠಕ್ಕಿಂತ ಪ್ರೇಮ, ಕಾಮಕ್ಕೆ ಹದಿಹರೆಯದವರು ಮನಸೋಲುವ ಪ್ರವೃತ್ತಿ ಹೆಚ್ಚು. ಈ ವಯಸ್ಸು ದುಡುಕುತನದ್ದು. ಮಕ್ಕಳು ಅಡ್ಡದಾರಿ ತುಳಿಯುವದನ್ನು ತಪ್ಪಿಸಲು ಪೋಷಕರು ತಮಗೆ ತೋಚಿದಂತಹ ಕಟ್ಟುಪಾಡುಗಳನ್ನು ಮಕ್ಕಳಿಗೆ ಹಾಕಿದಾಗ ಅವರ ಯುವ ಮನಸ್ಸು ಕೆರಳುತ್ತದೆ. ಶಿಸ್ತು, ನೀತಿ, ನಿಯಮಗಳಡಿಯಲ್ಲಿ ಅವರನ್ನು ಬಂಧಿಸಿಡುವುದು ಕಷ್ಟ. ಇಂತಹ ಕಟ್ಟುಪಾಡುಗಳು ಮಕ್ಕಳನ್ನು ಹೆತ್ತವರಿಂದ ಬಹುದೂರ ಮಾಡಿಬಿಡುತ್ತವೆ.

ಪ್ರೀತಿಯ ಆವೇಶದೊಳಗೆ ಮುಳುಗಿದವರಲ್ಲಿ ವಿವೇಚನೆ ತಾರ್ಕಿಕ ಚಿಂತನೆಗಳನ್ನು ನಿರ್ವಹಿಸುವ ಬುದ್ಧಿ ಕೆಲಸ ಮಾಡುವದಿಲ್ಲ. ಹಾಗಾಗಿ ಅಪರಾಧ ಮಾಡಲೂ ಹಿಂಜರಿಯುವದಿಲ್ಲ. ವಿದ್ಯಾಭ್ಯಾಸ ಹಾಗೂ ಉದ್ಯೋಗದ ಅವಕಾಶಗಳು ಮಹಿಳೆಯರಿಗೂ ಸಮಾನವಾಗಿ ಸಿಗುತ್ತಲಿವೆ. ಅವರು ಎಲ್ಲರೊಡನೆ ಮುಕ್ತರಾಗಿ ಬೆರೆಯುವ ಅವಕಾಶಗಳು ದೊರೆಯುತ್ತವೆ. ಮಹಿಳೆಯರಿಗೆ ಸಬಲತೆ ಸಿಗಬೇಕೆಂಬ ಕೂಗಿಗೆ ತುಸು ಮಾನ್ಯತೆ ಕೂಡಾ ಸಿಕ್ಕಿದೆ. ಜಾತಿ ಧರ್ಮದ ಸಂಕೋಲೆಗಳಿಗೆ ಅಪ್ಪ ಅಮ್ಮಂದಿರು ಜೋತು ಬೀಳುವ ಮುನ್ನ ಅವಘಡಗಳನ್ನು ತಡೆಯಲು ಬೇಕಾದ ಸೂಕ್ತ ನಿರ್ಣಯಗಳನ್ನು ತೆಗೆದು ಕೊಳ್ಳಬೇಕು. ಅದರಂತೆಯೇ ತಂದೆ ತಾಯಿಗಳು ಹೇಳುವದೆಲ್ಲ ಮೌಢ್ಯತನದ್ದು ಎಂಬ ಅಲ್ಪ ತಿಳುವಳಿಕೆಯೂ ಮಕ್ಕಳಲ್ಲಿ ಬರಬಾರದು. ಇಬ್ಬರೂ ಮುಕ್ತವಾಗಿ ಬೆರೆತು ಪರಸ್ಪರ ಭಾವನೆಗಳನ್ನು ಗೌರವಿಸಿ ಮಾರ್ಗದರ್ಶನ ನೀಡಿ ಕುಟುಂಬದ ಹಿತವು ಎಲ್ಲರ ನಡವಳಿಕೆಯ ಮೇಲೆ ಅಡಗಿದೆ ಎಂಬುದು ತಿಳಿಸಬೇಕು.

ಕೇವಲ ಮಕ್ಕಳಷ್ಟೇ ಉತ್ತಮ ದಾರಿಯಲ್ಲಿ ನಡೆಯಿರಿ ಎಂದು ಹೇಳುವ ಕಾಲ ಇದಲ್ಲ. ತಂದೆ ತಾಯಿಗಳು ಸಂಬಂಧಗಳ ಪ್ರೀತಿಯ ಹೊಸದೊಂದು ಗಾಳಿ ಮತ್ತೇ ಹಿತವಾಗಿ ಬೀಸುವಂಥ ಸುಸಂದರ್ಭ ವನ್ನು ರೂಪಿಸುವ ಸಮಯ ಕೂಡಾ ಅವರ ಮುಂದಿರುತ್ತದೆ. ಈ ಅರಿವಿನ ಬೀಜ ಬಿತ್ತಬೇಕಾದರೆ ತಿಳುವಳಿಕೆ, ನೈತಿಕ ಶಿಕ್ಷಣ ಇರಬೇಕು. ನಮ್ಮ ಶಿಕ್ಷಣ ವ್ಯವಸ್ಥೆಯನ್ನು ಮೌಲ್ಯವರ್ಧಿತಗೊಳಿಸಿದರೆ ಮುಂದಿನ ತಲೆಮಾರಿನವರಾದರೂ ಅದನ್ನು ಅನುಕರಣೆ ಮಾಡಲು ಪ್ರೇರೇಪಣೆ ನೀಡುವಂತಿರಬೇಕು. ಹಿಂದಿನವರು ಎಷ್ಟೊಂದು ತಗ್ಗಿ ಬಗ್ಗಿ ನಡೆಯುತಿದ್ದರೆಂಬ ಅನೇಕ ನಿದರ್ಶನ, ಕಥೆಗಳು ನಮ್ಮ ಮುಂದಿವೆ. ಸಂಬಂಧಗಳು ಮೌಲಿಕವಾದದ್ದು. ಅವುಗಳಿಗೆ ಮಹತ್ವ, ಗೌರವವನ್ನು ಕೊಡಬೇಕು. ಆಷಾಢಭೂತಿತನ ಒಳ್ಳೆಯದಲ್ಲ. ಸಂಬಂಧಗಳ ನಿರ್ವಹಣೆಯ ವಿಚಾರದಲ್ಲಿ ಎಲ್ಲರೂ ಸಮಾನ ಜವಾಬ್ದಾರಿ



ವಹಿಸಬೇಕು. ಮಕ್ಕಳೊಂದಿಗೆ ಸ್ನೇಹಿತರಂತೆ ವರ್ತಿಸಬೇಕಾದ ಹಿರಿಯರು, ಹಿರಿಯರನ್ನು ಗೌರವಿಸಿ ಅವರ ಮಾತುಗಳನ್ನು ಪಾಲಿಸುವ ಮಕ್ಕಳಿಂದಾಗಿ ಉತ್ತಮ ಸಂಬಂಧ ಮೂಡಿ ಬರಲು ಸಾಧ್ಯ. ಇಲ್ಲದೇ ಹೋದಲ್ಲಿ ಬೇಲಿಯೇ ಎದ್ದು ಮೆಯ್ದಂತೆ ಆದರೆ ಆಶ್ಚರ್ಯ ಪಡುವಂತಹದ್ದು ಏನೂ ಇಲ್ಲ.

## ಪ್ರೀತಿಯ ವಿದ್ಯಾರ್ಥಿಗಳೇ ನಿವೂ ಬರೆಯಿರಿ

ಪ್ರೀತಿಯ ವಿದ್ಯಾರ್ಥಿಗಳೇ ನಿಮಗಾಗಿ ನಿಮ್ಮ ಬರವಣಿಗೆ ಕೌಶಲ್ಯ ಹೆಚ್ಚಿಸಿಕೊಳ್ಳಲು **ಹಂಪಿ ಟೈಮ್ಸ್** **ಸ್ಟುಡೆಂಟ್ ಕಾಲಂ** ವೇದಿಕೆ ಕಲ್ಪಿಸಿದೆ. ನೀವು ಸಣ್ಣ ಸಣ್ಣ ಕಥೆ, ಕವನಗಳನ್ನು 200 ಪದಗಳಿಗೆ ಮೀರದಂತೆ ಬರೆಯಬಹುದು. ಇಂದೇ ಆರಂಭಿಸಿ ನೀವು ಭವಿಷ್ಯದಲ್ಲಿ ಉತ್ತಮ ಲೇಖಕರಾಗಿ ಬೆಳೆಯಿರಿ.

ಇ–ಮೇಲ್:hampitimes@gmail.com
M: 94486 33038

## ನೀವೂ ಬರೆಯಬಹುದು

ಹಂಪಿ **ಟೈಮ್ಸ್** ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

### ಬೆಳಕಿನ ಹಾದಿ

ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**–: ಸಂಪಾದಕರು :–**

**ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.**
ಇ–ಮೇಲ್:hampitimes@gmail.com
M: 94486 33038



## ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

– ಜಾಹೀರಾತು ವ್ಯವಸ್ಥಾಪಕರು.


**ಮಾನವಸಹಿತ ಬಾಹ್ಯಾಕಾಶ ಯಾನಕ್ಕೆ ಹಲವಾರು ಹಂತದ ಸಿದ್ಧತೆಗಳು ಕೂಡ ನಡೆಯುತ್ತಿರುವುದು ಭಾರತೀಯರಾದ ನಮಗೆ ತುಂಬಾ ಗರ್ವ ಪಡುವ ಸಂಗತಿಗಳಾಗಿವೆ. ಈ ವೆಲ್ಲ ಸಾಧನೆಗಳ ಹಿಂದಿರುವ ನಮ್ಮ ಹೆಮ್ಮೆಯ ಇಸ್ರೋದ ವಿಜ್ಞಾನಿಗಳ ತಂಡದ ಕಾರ್ಯವನ್ನು ಶ್ಲಾಘಿಸೋಣ.**

# ಭಾರತದ ಸ್ವದೇಶಿ ಉಪಗ್ರಹಕ್ಕೆ 50ರ ಸಂಭ್ರಮ



ದೇಶೀಯವಾಗಿ ನಿರ್ಮಿಸಿದ ಭಾರತದ ಮೊಟ್ಟ ಮೊದಲ ಉಪಗ್ರಹ ಆರ್ಯಭಟವನ್ನು 1975ರ ಏಪ್ರಿಲ್ 19ರಂದು 'ರಷ್ಯಾದ ಕಪುಷ್ಟಿನ್ ಯಾರ್‌ನಿಂದ ಉಡಾವಣೆ ಮಾಡಲಾಯಿತು. ಈ ಉಡಾವಣೆಗೆ ಈಗ 50ರ ಸಂಭ್ರಮಾಚರಣೆ. ಆರ್ಯಭಟ ಉಪಗ್ರಹ ನಿರ್ಮಾಣ ಕಾರ್ಯ ಆರಂಭವಾಗಿದ್ದು ಕರ್ನಾಟಕದ ಬೆಂಗಳೂರಿನಲ್ಲಿ. ಪ್ರಾಚೀನ ಭಾರತದ ಅದ್ವಿತೀಯ ಗಣಿತ ಶಾಸ್ತ್ರಜ್ಞ ಮತ್ತು ಖಗೋಳ ವಿಜ್ಞಾನಿ ಆರ್ಯಭಟರ ಗೌರವ ಸ್ಮರಣೆಗಾಗಿ ಆ ಉಪಗ್ರಹಕ್ಕೆ ಅವರ ಹೆಸರನ್ನು ಇಡಲಾಗಿತ್ತು. ಈ ಉಪಗ್ರಹ ಉಡಾವಣೆಯ ಮೂಲಕ ಈ ಮಹಾನ್ ವಿಜ್ಞಾನಿಯ ಹೆಸರು ಇಡೀ ಜಗತ್ತಿಗೆ ತಿಳಿಯುವಂತಾಯಿತು. ಆರ್ಯಭಟರು ಚಂದ್ರಗುಪ್ತ ವಿಕ್ರಮಾದಿತ್ಯನ ಆಸ್ಥಾನದಲ್ಲಿದ್ದ ಗೌರಾನ್ವಿತ ಪಂಡಿತರಲ್ಲಿ ಒಬ್ಬರಾಗಿದ್ದರು. ಅವರೊಬ್ಬ ಕೇವಲ ಗಣಿತಜ್ಞ ಮತ್ತು ಖಗೋಳ ಶಾಸ್ತ್ರಜ್ಞ ಮಾತ್ರ ಆಗಿರಲಿಲ್ಲ, ಬದಲಾಗಿ ಮಹಾನ್ ತತ್ವಜ್ಞಾನಿಯೂ ಕೂಡ ಆಗಿದ್ದರು. ಭೂಮಿಯು ತನ್ನ ಅಕ್ಷದ ಮೇಲೆ ತಿರುಗುವ ಸೂರ್ಯ ಕೇಂದ್ರಿತ ಮಾದರಿಯನ್ನು ಪ್ರಸ್ತಾಪಿಸಿದರು. ಪೈ ಬೆಲೆಯನ್ನು ನಿಖರವಾಗಿ 3.1416 ಎಂದು ಗುರುತಿಸಿದರು. ಶೂನ್ಯ ಮತ್ತು ಚಿಹ್ನೆ ಕಾರ್ಯಗಳ ಪರಕಲ್ಪನೆ ಪರಿಚಯಿಸಿದರು. ಗಮನಾರ್ಹ ನಿಖರತೆಯೊಂದಿಗೆ ನಕ್ಷತ್ರಗಳ ತಿರುಗುವಿಕೆ, ಸೂರ್ಯ ಮತ್ತು ಚಂದ್ರ ಗ್ರಹಣಗಳ ಕುರಿತು ಲೆಕ್ಕ ಹಾಕಿದರು. ಸಮಯ, ಬೀಜಗಣಿತ ಮತ್ತು ಅಂಕಗಣಿತ, ಕ್ಯಾಲೆಂಡರ್ ಲೆಕ್ಕಾಚಾರಗಳು, ಆಕಾಶ ಗೋಳ ಮತ್ತು ಗ್ರಹಗಳ ಚಲನೆ ಮುಂತಾದ ಅಧ್ಯಯನ ವಸ್ತುಗಳನ್ನು ಅವರ ಆರ್ಯಭಟೀಯಮ್ ಎಂಬ ಗ್ರಂಥ ಒಳಗೊಂಡಿದ್ದು, ಭಾರತೀಯ ಖಗೋಳ ವಿಜ್ಞಾನಕ್ಕೆ ಬುನಾದಿಯಾಗಿದೆ ಎಂದು ಹೇಳಲಾಗುತ್ತದೆ.

ಆರ್ಯಭಟ ಉಪಗ್ರಹ ನಿರ್ಮಾಣವು ಡಾ.ವಿಕ್ರಮ್ ಸಾರಾಭಾಯ್ ಮತ್ತು ಪ್ರೊ.ಯು.ಆರ್.ರಾವ್ ಅವರಂತಹ ವಿಜ್ಞಾನಿಗಳ ನೇತೃತ್ವದಲ್ಲಿ ಸೀಮಿತ ಸಂಪನ್ಮೂಲಗಳೊಂದಿಗೆ ಕೆಲಸ ಮಾಡುವ 25 ಇಸ್ರೋ ಎಂಜಿನಿಯರ್‌ಗಳ ತಂಡವನ್ನು ಹೊಂದಿತ್ತು. ಈ ಉಪಗ್ರಹವು 26 ಮುಖಗಳನ್ನು ಹೊಂದಿದ್ದು, ಸುಮಾರು 1.4ಮೀ ವ್ಯಾಸವನ್ನು ಹೊಂದಿತ್ತು. ಅದರ 24 ಮುಖಗಳ ಮೇಲೆ ಸೌರಚಾಲಿತ ವಿದ್ಯುತ್ ಕೋಶಗಳನ್ನು ಅಳವಡಿಸಲಾಗಿತ್ತು. ಸೋವಿಯತ್ ಕಾಸ್ಮೋಸ್–3ಎಂ ರಾಕೆಟ್ ಬಳಸಿ ಉಡಾವಣೆ ಮಾಡಲಾಯಿತು. ಈ ಉಪಗ್ರಹ ಉಡಾವಣೆಯ ವೈಜ್ಞಾನಿಕ ಉದ್ದೇಶಗಳೆಂದರೆ ಎಕ್ಸ್–ರೇ ಖಗೋಳ ಭೌತಶಾಸ್ತ್ರ ಪ್ರಯೋಗಗಳು, ಸೌರ ನ್ಯೂಟ್ರಾನ್ ಮತ್ತು ಗ್ಯಾಮಾ ಕಿರಣ ಪತ್ತೆ, ಮೇಲಿನ ವಾತಾವರಣದ ಅಧ್ಯಯನ ಒಳಗೊಂಡಿತ್ತು. ಆದರೆ ಈ ಉಪಗ್ರಹ ಕಕ್ಷೆಯನ್ನು ಸೇರಿದ ಐದೇ ದಿನದಲ್ಲಿ ವಿದ್ಯುತ್ ವೈಫಲ್ಯಕ್ಕೆ ಒಳಗಾಯಿತು. ಇದರ ಪರಿಣಾಮದಿಂದ ಭೂಮಿಯ ಸಂಪರ್ಕ ಕಡಿದುಕೊಂಡಿತು.



ರಾಜು. ಭೂಶೆಟ್ಟಿ
ಲೇಖಕರು, ಹುಬ್ಬಳ್ಳಿ

ಅಂದರೆ ನಿರೀಕ್ಷಿತ ಮಟ್ಟದಲ್ಲಿ ಯಶಸ್ಸು ಸಾಧಿಸುವುದು ಅಸಾಧ್ಯವಾಯಿತು. ಆದರೆ ಮೊದಲ ಪ್ರಯತ್ನದಲ್ಲಿ ಸ್ವಲ್ಪ ಹಿನ್ನಡೆಯಾದರೂ ಕೂಡ ಇಂದು ಬಾಹ್ಯಾಕಾಶದಲ್ಲಿ ಭಾರತ ಬರೆದ ಹಲವಾರು ಐತಿಹಾಸಿಕ ಸಾಧನೆಗಳಿಗೆ ಇದುವೇ ಭದ್ರ ಬುನಾದಿಯನ್ನು ಒದಗಿಸಿತ್ತು ಎಂದರೆ ತಪ್ಪಾಗಲಾರದು. ಅಷ್ಟೇ ಅಲ್ಲ, ಬಾಹ್ಯಾಕಾಶ ಕ್ಷೇತ್ರದಲ್ಲಿ ಹಲವಾರು ಗಣ್ಯ ರಾಷ್ಟ್ರಗಳ ಸಾಲಿನಲ್ಲಿ ಭಾರತದ ಪ್ರವೇಶವನ್ನು ಜಗತ್ತು ಗುರುತಿಸುವಂತೆ ಮಾಡಿದ್ದು ಕೂಡ ಈ ಉಪಗ್ರಹ ಉಡಾವಣೆಯಿಂದಲೇ. ಆರ್ಯಭಟ ಉಪಗ್ರಹದ ಮಹತ್ವವನ್ನು ಸಾರುವ ಉದ್ದೇಶದಿಂದ ಭಾರತೀಯ ರಿಸರ್ವ ಬ್ಯಾಂಕ್ 1976ರಿಂದ 1997ರ ನಡುವೆ ಮುದ್ರಣವಾದ ಎರಡು ರೂಪಾಯಿಗಳ ನೋಟಿನಲ್ಲಿ ಉಪಗ್ರಹದ ಚಿತ್ರವನ್ನು ಮುದ್ರಿಸಿತು. ಈ ಉಪಗ್ರಹ ಉಡಾವಣೆಯಿಂದ ಉಪಗ್ರಹ ವಿನ್ಯಾಸ, ಉಪಗ್ರಹ ಯೋಜನೆಗಳು, ಉಪಗ್ರಹ ಉಡಾವಣೆಯ ಸವಾಲುಗಳನ್ನು ಅರ್ಥೈಸಿಕೊಳ್ಳುವಲ್ಲಿಯೂ ತುಂಬಾ ಸಹಾಯಕವಾಯಿತು.

ಒಟ್ಟಾರೆಯಾಗಿ 'ಸಾವಿರ ಮೈಲುಗಳ ಪ್ರಯಾಣವು ಒಂದು ಹೆಜ್ಜೆಯಿಂದ ಪ್ರಾರಂಭವಾಗುತ್ತದೆ' ಎಂಬ ಉಲ್ಲೇಖದಂತೆ ಅಂದು ಆರ್ಯಭಟ ಉಪಗ್ರಹ ಉಡಾವಣೆಯಿಂದ ಆರಂಭವಾದ ಮೊದಲ ಹೆಜ್ಜೆಯ ಪ್ರಯಾಣ ಇಂದು ಯಶಸ್ವಿಯಾಗಿ ಸಾವಿರಾರು ಮೈಲುಗಳನ್ನು ಕ್ರಮಿಸುತ್ತಾ ಸಾಗುತ್ತಿರುವುದು ನಾವೆಲ್ಲರೂ ಸಂಭ್ರಮಿಸ ಬೇಕಾದ ಕ್ಷಣವಾಗಿದೆ. ಇಸ್ರೋದ ಯಾತ್ರೆಯು ಅತೀ ಕಡಿಮೆ ವೆಚ್ಚದಲ್ಲಿ ಮಂಗಳ ಗ್ರಹದ ವಿಶೇಷತೆ ಕುರಿತು ಅಧ್ಯಯನಕ್ಕಾಗಿ ಮಂಗಳಯಾನ ಹಾಗೂ ಚಂದ್ರಯಾನ–3 ಯೋಜನೆಯ ಮೂಲಕ ಚಂದ್ರನ ದಕ್ಷಿಣ ಧ್ರುವದಲ್ಲಿ ರೋವರ್ ಇಳಿಸಿದ ವಿಶ್ವದ ಮೊದಲ ರಾಷ್ಟ್ರ ಎಂಬ ಖ್ಯಾತಿಗೂ ಕಾರಣವಾಯಿತು. 2017ರ ಫೆಬ್ರುವರಿಯಲ್ಲಿ–15ರಂದು ಇಸ್ರೋ ಸಂಸ್ಥೆಯು 104 ಉಪಗ್ರಹಗಳನ್ನು ಉಡಾವಣೆ ಮಾಡುವ ಮೂಲಕ ಒಂದೇ ರಾಕೆಟ್‌ನಲ್ಲಿ ಅತಿ ಹೆಚ್ಚು ಉಪಗ್ರಹಗಳನ್ನು ಉಡಾವಣೆ ಮಾಡಿದ ರಾಷ್ಟ್ರ ಎಂಬ ದಾಖಲೆಯನ್ನು ಬರೆಯಿತು. ಸೂರ್ಯನ ಅಧ್ಯಯನದ ಉದ್ದೇಶಕ್ಕಾಗಿ ಆದಿತ್ಯ ಎಲ್–1 ಯೋಜನೆ, ತನ್ನದೇ ಆದ ಬಾಹ್ಯಾಕಾಶ ನಿಲ್ದಾಣವನ್ನು ನಿರ್ಮಿಸುವ ಗುರಿ, ಮಾನವಸಹಿತ ಬಾಹ್ಯಾಕಾಶ ಯಾನಕ್ಕೆ ಹಲವಾರು ಹಂತದ ಸಿದ್ಧತೆಗಳು ಕೂಡ ನಡೆಯುತ್ತಿರುವುದು ಭಾರತೀಯರಾದ ನಮಗೆ ತುಂಬಾ ಗರ್ವ ಪಡುವ ಸಂಗತಿಗಳಾಗಿವೆ. ಈ ಎಲ್ಲ ಸಾಧನೆಗಳ ಹಿಂದಿರುವ ನಮ್ಮ ಹೆಮ್ಮೆಯ ಇಸ್ರೋದ ವಿಜ್ಞಾನಿಗಳ ತಂಡದ ಕಾರ್ಯವನ್ನು ಶ್ಲಾಘಿಸೋಣ.

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No. 15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055

## ಕವಿ ಮನಸು

### ಮಹಾತಿರುವು

ಇದು ಮಹಾತಿರುವು
ತಿರುವು ದಾಟಿದರೆ ಸತ್ಯ,ನ್ಯಾಯ ,ಧರ್ಮಗಳ
ಪುಣ್ಯ ಲೋಕ..

ಇಲ್ಲಿಯವರೆಗೆ ಬಂದಿದ್ದೀರಿ
ಇನ್ನೂ ನಾಲ್ಕು ಹೆಜ್ಜೆ ಹಾಕಿಬಿಡಿ
ಬರೀ ನಾಲ್ಕೇ ನಾಲ್ಕು ಹೆಜ್ಜೆ..

ಅಲ್ಲಿ ಸ್ವಾರ್ಥ ಮೋಸ,
ದ್ರೋಹ ಹಿಂಸೆಗಳು ಇಲ್ಲವೇ ಇಲ್ಲ
ಅಲ್ಲಿ ನೆಮ್ಮದಿಯಿಂದ ಬದುಕ ಸಾಗಿಸೋಣ
ಬನ್ನಿ..

ಯಾಕೆ ಎಲ್ಲರೂ ಮೌನ ಮಾತನಾಡುತ್ತಲೇ
ಇಲ್ಲ ಯಾರೊಬ್ಬರೂ..
ಮುನಿಸೇ ನನ್ನ ಮೇಲೆ..
ಬಹುದೂರ ನಡೆಸಿಬಿಟ್ಟನೆಂದು...
ಇನ್ನೇನು ಬಂದೇ ಬಿಟ್ಟಿತು
ಬರೀ ನಾಲ್ಕು ಹೆಜ್ಜೆ..
ಬೇಗ ಬೇಗ ಬಂದುಬಿಡಿ

ಯಾರೊಬ್ಬರೂ ಮಾತನಾಡುತ್ತಿಲ್ಲ

ಹಿಂತಿರುಗಿ ನೋಡಿದೆ
ಯಾರೊಬ್ಬರೂ ಕಾಣಿಸುತ್ತಿಲ್ಲ..
ದೂರದಲ್ಲಿ ಅವರುಗಳು ಹಿಂದಿರುಗಿ
ಓಡುತ್ತಿರುವುದು ಕಾಣಿಸಿತು..

ಅವರಿಷ್ಟದ ಬದುಕು
ಅಲ್ಲಿಯೇ ಇದೆ..
ಅವರಿಷ್ಟದ ಬದುಕಿನ ಕಡೆ ಅವರುಗಳು
ಓಡುತ್ತಿದ್ದಾರೆ..
ಹೀಗೆ ಓಡುವಾಗ ಅವರುಗಳಿಗೆ
ಆಯಾಸವಾಗುತ್ತಿಲ್ಲ..
ನಾಲ್ಕು ಹೆಜ್ಜೆ ಹಾಕಲು ಅವರಿಗೆ
ಆಯಾಸವಾಗಿತ್ತು..

ಹೋಗಲಿಬಿಡಿ
ಓಡಿಹೋಗಲಿ ಬಿಡಿ
ನಾನಿನ್ನು ಕೂಗಿ ಕರೆಯಲಾರೆ

ಸತ್ಯ, ಧರ್ಮ, ನ್ಯಾಯಗಳ ಲೋಕ
ಪರಿಶುದ್ಧವಾಗಿರಲಿ..

–ಮಹಿಮ


ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ ಕನ್ನಡ ದಿನ ಪತ್ರಿಕೆ
ವಿಜಯನಗರ ಜಿಲ್ಲೆಯ ಸಮಗ್ರ ಸುದ್ದಿ, ವಿಜ್ಞಾನ, ವಿಶೇಷ ಲೇಖನಗಳನ್ನು ಓದಲಿಚ್ಛಿಸುವವರು ಈ ಕೆಳಗಿನ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ, ವಾಟ್ಸಪ್ ಗ್ರೂಪಿಗೆ ಜಾಯಿನ್ ಆಗಿ ಹಂಪಿ ಟೈಮ್ಸ್ ಇ-ಪತ್ರಿಕೆ ಓದಿರಿ.
Only Admins can Send Messages to this Group
Join with Us

## ನಿತ್ಯ ಪಂಚಾಂಗ

ಮಾಸ: ಚೈತ್ರ । ಸಂವತ್ಸರ: ವಿಶ್ವಾವಸು

**24–04–2025 – ಗುರುವಾರ**

| | |
|---|---|
| ತಿಥಿ | : ಏಕಾದಶಿ |
| ಪಕ್ಷ | : ಕೃಷ್ಣ |
| ನಕ್ಷತ್ರ | : ಶತಭಿಷ |
| ಯೋಗ | : ಬ್ರಹ್ಮ |
| ಕರಣ | : ಬಾಳವ |
| ಸೂರ್ಯೋದಯ | : 06:00:05 |
| ಸೂರ್ಯಾಸ್ತ | : 18:50:17 |
| ರಾಹು ಕಾಲ | : 14:01–15:38 |
| ಯಮಘಂಡ ಕಾಲ | : 06:00–07:36 |
| ಗುಳಿಕ ಕಾಲ | : 09:13–10:49 |



## ತುಂಗಭದ್ರಾ ನೀರಿನ ಮಟ್ಟ

ಬುಧವಾರ : 23–04–2025

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1584.35 ಅಡಿ |
| ಒಳ ಹರಿವು | 0 ಕ್ಯುಸೆಕ್ |
| ಹೊರ ಹರಿವು | 400 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 6.910 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |

ಕಳೆದ ವರ್ಷ ಇದೇ ದಿನ

| | |
|---|---|
| ಇಂದಿನ ಮಟ್ಟ | 1578.52 ಅಡಿ |
| ಒಳ ಹರಿವು | 0 ಕ್ಯುಸೆಕ್ |
| ಹೊರ ಹರಿವು | 177 ಕ್ಯುಸೆಕ್ |
| ಸಾಮರ್ಥ್ಯ | 3.795 ಟಿಎಂಸಿ |

# ನಮಗೇಕೆ ಕಾನೂನುಗಳು ಬೇಕು?

## ನಮ್ಮ ಹಕ್ಕುಗಳು ನಮ್ಮ ಸ್ವಾತಂತ್ರ್ಯವನ್ನು ತೋರಿದರೆ, ನಮ್ಮ ಕರ್ತವ್ಯಗಳು ನಮ್ಮ ಜವಾಬ್ದಾರಿಯನ್ನು ನೆನಪಿಸುತ್ತವೆ

ಪ.ದವಿ ತರಗತಿಯ ಮೊದಲ ದಿನ. ಪ್ರೊಫೆಸರ್ ಒಬ್ಬರು ತರಗತಿಯನ್ನು ಪ್ರವೇಶಿಸಿ ಇಂಟ್ರೊಡಕ್ಷನ್ ಟು ಲಾ ಎಂಬ ವಿಷಯದ ಕುರಿತು ಮಕ್ಕಳಿಗೆ ಬೋಧನೆ ಮಾಡಲು ಬಂದರು. ನೇರವಾಗಿ ತರಗತಿಯನ್ನು ಪ್ರವೇಶಿಸಿದ ಅವರು ಮುಂದಿನ ಸಾಲಿನಲ್ಲಿ ಕುಳಿತ ಓರ್ವ ವಿದ್ಯಾರ್ಥಿಯನ್ನು ಉದ್ದೇಶಿಸಿ ನಿನ್ನ ಹೆಸರೇನು ಎಂದು ಕೇಳಿದರು ವಿದ್ಯಾರ್ಥಿ ತನ್ನ ಹೆಸರನ್ನು ಹೇಳಿದ. ಕೂಡಲೇ ಆ ವಿದ್ಯಾರ್ಥಿಗೆ ತನ್ನ ತರಗತಿಯಿಂದ ಹೊರಗೆ ಹೋಗಲು ಪ್ರೊಫೆಸರ್ ಆದೇಶಿಸಿದರು.

ವಿದ್ಯಾರ್ಥಿಗೆ ತುಸು ಗಲಿಬಿಲಿಯಾಯಿತು... ಅಂತೆಯೇ ಉಳಿದ ವಿದ್ಯಾರ್ಥಿಗಳು ಪರಸ್ಪರ ಒಬ್ಬರ ಮುಖ ಒಬ್ಬರು ನೋಡಿಕೊಂಡರು. ಎಲ್ಲರ ಮುಖದಲ್ಲೂ ಒಂದು ರೀತಿಯ ದಿಗಿಲು.

ಸರ್ ಎಂದು ಆ ವಿದ್ಯಾರ್ಥಿ ಪ್ರೊಫೆಸರರನ್ನು ಕರೆಯಲು ಕೂಡಲೇ ನನ್ನ ತರಗತಿಯನ್ನು ಬಿಟ್ಟು ಹೊರಟು ಹೋಗು ಹೊರಗೆ ನಿಂತುಕೋ, ಇನ್ನೆಂದು ನನ್ನ ತರಗತಿಯನ್ನು ಪ್ರವೇಶಿಸುವ ಪ್ರಯತ್ನ ಮಾಡಬೇಡ ಎಂದು ಜೋರಾಗಿ ಕೂಗಿದರು. ಗಾಬರಿ ಮತ್ತು ಆತಂಕದಿಂದ ಕೂಡಿದ ವಿದ್ಯಾರ್ಥಿ ತನ್ನೆಲ್ಲ ಪರಿಕರಗಳನ್ನು ಜೋಡಿಸಿಕೊಂಡು ಕೂಡಲೇ ತರಗತಿಯಿಂದ ಹೊರಗೆ ಹೋದ. ಆ ಇಡೀ ಕೋಣೆಯಲ್ಲಿ ಸ್ಥಬ್ದತೆ ಆವರಿಸಿತ್ತು... ಯಾರೊಬ್ಬರೂ ಸೊಲ್ಲೆತ್ತುವ ಧೈರ್ಯ ಮಾಡಲಿಲ್ಲ.

ವಿದ್ಯಾರ್ಥಿ ಹಾಗೆ ಹೊರಟು ಹೋದ ಮೇಲೆ ಪ್ರೊಫೆಸರ್ ರ ಮುಖದ ಮೇಲೆ ನಸುನಗು ಮೂಡಿತು. ಇನ್ನು ತರಗತಿಯನ್ನು ಮುಂದುವರಿಸೋಣ ಎಂದು ಹೇಳಿದ ಅವರು ನಮಗೆ ಕಾನೂನುಗಳು ಏಕೆ ಬೇಕು? ಎಂದು ಪ್ರಶ್ನಿಸಿದರು.

ವಿದ್ಯಾರ್ಥಿಗಳಲ್ಲಿ ತಳಮಳ ಕಡಿಮೆಯಾಗಿರದಿದ್ದರೂ ನಿಧಾನವಾಗಿ ಒಬ್ಬೊಬ್ಬರಾಗಿ ಎದ್ದು ನಿಂತು ಉತ್ತರಿಸಲು ಆರಂಭಿಸಿದರು.

ಸಾಮಾಜಿಕ ಸುವ್ಯವಸ್ಥೆಯನ್ನು ಕಾಪಾಡಲು ನಮಗೆ ಕಾನೂನಿನ ಅವಶ್ಯಕತೆ ಇದೆ. ಜನರು ನಿಯಮಗಳನ್ನು ಪಾಲಿಸಲು ಕಾನೂನಿನ ಅವಶ್ಯಕತೆ ಇದೆ. ನಿಯಮಗಳನ್ನು ಮುರಿಯುವವರನ್ನು ಶಿಕ್ಷಿಸಲು ನಮಗೆ ಕಾನೂನಿನ ಅವಶ್ಯಕತೆ ಇದೆ. ಹೀಗೆ ಒಬ್ಬೊಬ್ಬರೇ ಉತ್ತರ ಕೊಡುವಾಗ ಕೊನೆಯಲ್ಲಿ ಎದ್ದು ನಿಂತ ಓರ್ವ ವಿದ್ಯಾರ್ಥಿನಿ ತುಸು ಸಂಕೋಚ ಮತ್ತು ಮುಜುಗರದಿಂದ ನ್ಯಾಯವನ್ನು ಪಡೆಯಲು ನಮಗೆ ಕಾನೂನಿನ ಅವಶ್ಯಕತೆ ಇದೆ ಎಂದು ಹೇಳಿದಳು.

ಎಕ್ಸಾಕ್ಟ್ಲಿ... ನ್ಯಾಯವನ್ನು ಪಡೆಯಲು ಪರಿಪಾಲಿಸಲು ನಮಗೆ ಕಾನೂನಿನ ಅವಶ್ಯಕತೆ ಇದೆ ಎಂದು ಹೇಳಿದ ಪ್ರೊಫೆಸರ್ ವಿದ್ಯಾರ್ಥಿಗಳೆಲ್ಲರೆಡೆ ಕೈ ಮಾಡಿ "ಈಗ ಹೇಳಿ ನಾನು ಆ ವಿದ್ಯಾರ್ಥಿಯನ್ನು ವಿನಾಕಾರಣ ತರಗತಿಯಿಂದ ಹೊರಗೆ ಹಾಕಿದ್ದು ಸರಿ ಎಂದೆನಿಸುತ್ತದೆಯೇ? "

ಯಾರೊಬ್ಬರ ಬಾಯಿಂದಲೂ ಯಾವುದೇ ಉತ್ತರ ಬರಲಿಲ್ಲ. ಮೌನವಾಗಿಯೇ ಉಳಿದ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಪ್ರೊಫೆಸರ್ ಕೇಳಿದರು "ಹಾಗಾದರೆ ಹೇಳಿ ಆ ವಿದ್ಯಾರ್ಥಿಯನ್ನು ಹೊರಹಾಕಿದ್ದು ಸರಿಯೇ... ಆ ವಿದ್ಯಾರ್ಥಿಯನ್ನು ಹೊರ ಹಾಕಲು ಕಾರಣವೇನು ಎಂದು ಯಾರಾದರೂ ಪ್ರಶ್ನಿಸಿದಿರೇ?" ಎಂದಾಗ



ಇಲ್ಲವೆಂಬಂತೆ ಎಲ್ಲ ವಿದ್ಯಾರ್ಥಿಗಳು ತಲೆಯಾಡಿಸಿದರು.

"ಹಾಗಾದರೆ ನಿಮ್ಮಲ್ಲಿ ಯಾರೊಬ್ಬರೂ ಏಕೆ ಆ ವಿದ್ಯಾರ್ಥಿಯನ್ನು ಹೊರ ಹಾಕುವುದನ್ನು ತಡೆಯಲಿಲ್ಲ" ಎಂದು ಪ್ರೊಫೆಸರ್ ಪ್ರಶ್ನಿಸಲು ಎಲ್ಲರೂ ನಿರುತ್ತರರಾದರು.

ತಪ್ಪು ಮಾಡದೆ ಇದ್ದಾಗ ಪ್ರಶ್ನಿಸುವ ಧೈರ್ಯ ಇಲ್ಲದೆ ಹೋದರೆ ನಮಗೆ ಕಾನೂನು ಇದ್ದರೂ ಅದರಿಂದ ಪ್ರಯೋಜನವೇನು? ಎಂದು ಪ್ರೊಫೆಸರ್ ಪ್ರಶ್ನಿಸಿದರು.

ನಿಮ್ಮ ಕಣ್ಣೆದುರು ಅನ್ಯಾಯ ನಡೆದರೂ ನೀವು ಮೌನವಾಗಿ ಉಳಿದದ್ದು ಏಕೆ? ಎಂದು ಪ್ರೊಫೆಸರ್ ಮತ್ತೊಮ್ಮೆ ಪ್ರಶ್ನಿಸಿದರು.

ಹೋಗಿ ಆ ವಿದ್ಯಾರ್ಥಿಯನ್ನು ಕರೆದುಕೊಂಡು ಬನ್ನಿ ಎಂದು ಹೇಳಿದರು. ಆತನೇ ನಿಮ್ಮ ನಿಜವಾದ ಪ್ರೊಫೆಸರ್ ನಾನು ಕಾನೂನಿನ ಬೇರೊಂದು ವಿಭಾಗದಲ್ಲಿ ಓದುತ್ತಿರುವ ಇದೇ ಕಾಲೇಜಿನ ವಿದ್ಯಾರ್ಥಿ ಎಂದು ಹೇಳಿದ ಆತ ಗಂಭೀರವಾಗಿ ಕೋಣೆಯನ್ನು ಬಿಟ್ಟು ಹೊರ ನಡೆದನು.

ಇನ್ನೂ ದಿಗ್ಭ್ರಮೆಯಿಂದ ವಿದ್ಯಾರ್ಥಿಗಳು ಹೊರ ಬಂದಿರಲಿಲ್ಲ. ಕೇವಲ ಒಂದು ಘಟನೆಯ ಮೂಲಕ ಆತ ಕಾನೂನಿನ ಅವಶ್ಯಕತೆಯನ್ನು ವಿದ್ಯಾರ್ಥಿಗಳಿಗೆ ಮನಗಾಣಿಸಿದ್ದನು.

ನೆನಪಿಡಿ..... ನಮ್ಮ ಹಕ್ಕುಗಳಿಗಾಗಿ ನಾವು ಎದ್ದು ನಿಲ್ಲದಿದ್ದರೆ ನಮ್ಮ ಆತ್ಮ ಗೌರವವನ್ನು ಕಳೆದುಕೊಳ್ಳುತ್ತೇವೆ, ನಮ್ಮ ಆತ್ಮ ಗೌರವ ಇರಲಿ ಬಿಡು/ ಹೋಗಲಿ ಬಿಡು ಎಂದು ಕಡೆಗಾಣಿಸುವ ವಿಷಯವಲ್ಲ.

ಆತ್ಮ ಗೌರವವನ್ನು ಕಳೆದುಕೊಂಡ ವ್ಯಕ್ತಿ ತನ್ನನ್ನು ತಾನು ಗೌರವಿಸಿಕೊಳ್ಳಲು ಸಾಧ್ಯವಿಲ್ಲ.... ಬದುಕಿಯು ಸತ್ತಂತಹ ಅನುಭವ.

ಸ್ನೇಹಿತರೆ,.... ನಮ್ಮ ಬದುಕಿನಲ್ಲಿ ಪಾಲಕರು, ಒಡಹುಟ್ಟಿದವರು, ಸಂಬಂಧಿಗಳು, ಶಿಕ್ಷಕರು, ಸ್ನೇಹಿತರು ಹೀಗೆ ಹತ್ತು ಹಲವರು ತಮ್ಮದೇ ಆದ ಮಹತ್ತರ ಪಾತ್ರಗಳನ್ನು ವಹಿಸುತ್ತಾರೆ. ಎಲ್ಲರೊಂದಿಗೂ ಹೊಂದಾಣಿಕೆಯ ಬಾಳನ್ನು ನಡೆಸುವ ನಾವು ನಮ್ಮ ವ್ಯಕ್ತಿತ್ವವನ್ನು ಉನ್ನತವಾಗಿ ಕಟ್ಟಿಕೊಳ್ಳುವ ನಿಟ್ಟಿನಲ್ಲಿ ಕಾರ್ಯನಿರ್ವಹಿಸಬೇಕು.



ವೀಣಾ ಹೇಮಂತಗೌಡ ಪಾಟೀಲ್
ಲೇಖಕರು, ಮುಂಡರಗಿ, ಗದಗ

Scan For Digital Colourful HAMPI TIMES E-paper

ನಮ್ಮ ಸಂವಿಧಾನವು ನಮಗೆ ಹಕ್ಕುಗಳನ್ನು ಕೊಟ್ಟಿರುವಂತೆಯೇ ಕರ್ತವ್ಯಗಳನ್ನು ಕೂಡ ಕೊಟ್ಟಿದೆ. ನಮ್ಮ ಹಕ್ಕುಗಳು ನಮ್ಮ ಸ್ವಾತಂತ್ರ್ಯವನ್ನು ತೋರಿದರೆ ನಮ್ಮ ಕರ್ತವ್ಯಗಳು ನಮ್ಮ ಜವಾಬ್ದಾರಿಯನ್ನು ನೆನಪಿಸುತ್ತವೆ. ಹಕ್ಕುಗಳು ಮತ್ತು ಕರ್ತವ್ಯಗಳು ಒಂದೇ ನಾಣ್ಯದ ಎರಡು ಮುಖಗಳು.

ಅವಶ್ಯಕತೆ ಇದ್ದಲ್ಲಿ ನಮ್ಮ ಹಕ್ಕನ್ನು ಪ್ರತಿಪಾದಿಸುವ ನಾವುಗಳು ನಮ್ಮ ಕರ್ತವ್ಯಕ್ಕೂ ಕೂಡ ಅದೇ ರೀತಿಯಲ್ಲಿ ಬದ್ಧರಾಗಿರಲೇಬೇಕಾದದ್ದು ಅತ್ಯವಶ್ಯಕ.

ಎಲ್ಲೋ ಏನೋ ಒಂದು ತಪ್ಪು ಘಟಿಸಿದೆ ಎಂದರೆ ಅದು ನಮಗೆ ಸಂಬಂಧಿಸಿದ್ದಲ್ಲ ಎಂಬ ವಿಸ್ಮೃತಿ ಬೇಡ.... ಅರಮನೆಗೆ ಹತ್ತಿದ ಬೆಂಕಿ ನೆರೆಮನೆಯವರೆಗೆ ಬರುತ್ತದೆ ಎಂದರೆ ನಮ್ಮ ಮನೆಗೆ ಬರಲು ಮತ್ತಷ್ಟು ಸಮಯ ಬೇಕಾಗುತ್ತದೆಯೇ ಹೊರತು ಬರುವುದೇ ಇಲ್ಲ ಎಂದಲ್ಲ.

ಅಲ್ಲೆಲ್ಲೋ ದೂರ ದ್ವೀಪ ಪ್ರದೇಶಗಳ ಸಮುದ್ರದ ನಟ್ಟ ನಡುವಿನಲ್ಲಿ ಉಂಟಾಗುವ ಚಂಡಮಾರುತ, ಸುನಾಮಿಗಳು ಸಾವಿರಾರು ಮೈಲು ದೂರದಲ್ಲಿರುವ ಪ್ರದೇಶಗಳಿಗೂ ಹಬ್ಬಿ ಹವಾಮಾನದಲ್ಲಿ ಬದಲಾವಣೆ ಉಂಟಾಗಿ, ವಿಪರೀತ ಪ್ರವಾಹ ಮಳೆಯಂತಹ ಪರಿಸ್ಥಿತಿಗಳು ಜನ ಜೀವನವನ್ನು ಅಸ್ತವ್ಯಸ್ತವಾಗಿಸಲು ಸಾಧ್ಯವಿದೆ ಎಂದಾದರೆ, ಇಂದು ಜಗತ್ತಿನ ಯಾವುದೋ ಒಂದು ಮೂಲೆಯಲ್ಲಿ ಆಗಿರುವ ಆಕಸ್ಮಿಕಗಳು ದುರ್ಘಟನೆಗಳು ನಮ್ಮಲ್ಲಿ ಸಂಭವಿಸುವುದಿಲ್ಲ ಎಂಬುದರ ಗ್ಯಾರಂಟಿಯೇನು?

ಜಗತ್ತಿನ ಎಲ್ಲ ದೇಶಗಳ ಕಾನೂನು ನ್ಯಾಯವನ್ನು ಎತ್ತಿ ಹಿಡಿಯುವ, ಅನ್ಯಾಯವನ್ನು ಮಟ್ಟ ಹಾಕುವ ತಪ್ಪಿತಸ್ಥರಿಗೆ ಶಿಕ್ಷೆ ನೀಡುವ ಮತ್ತು ನಿರಪರಾಧಿಗಳನ್ನು ಶಿಕ್ಷೆಯಿಂದ ತಪ್ಪಿಸುವ ನಿಟ್ಟಿನಲ್ಲಿ ಕಾರ್ಯನಿರ್ವಹಿಸುತ್ತವೆ. ನೂರು ಅಪರಾಧಿಗಳು ತಪ್ಪಿಸಿಕೊಂಡರೂ ಓರ್ವ ನಿರಪರಾಧಿಗೆ ಶಿಕ್ಷೆಯಾಗಬಾರದು ಎಂಬ ಕಾನೂನಿನ ಪಾಠ ಜಗತ್ತಿನ ಎಲ್ಲೆಡೆ ಚಾಲ್ತಿಯಲ್ಲಿದ್ದು, ತುಸು ತಡವಾಗಿಯಾದರೂ ನ್ಯಾಯ ದೊರಕುತ್ತದೆ ಎಂಬ ಭರವಸೆ ಜನರಿಗಿದೆ.

ಅತ್ಯಂತ ಶ್ರೀಮಂತ ವ್ಯಕ್ತಿಯಿಂದ ಹಿಡಿದು ಸಮಾಜದ ಕಟ್ಟ ಕಡೆಯ ವ್ಯಕ್ತಿಯವರೆಗೂ ಸಮಾನ ಹಕ್ಕು, ಕರ್ತವ್ಯಗಳನ್ನು ನಮ್ಮ ಸಂವಿಧಾನವು ನಮಗೆ ಕೊಡಮಾಡಿದ್ದು ನಮ್ಮ ಸಾಮಾಜಿಕ ಹಕ್ಕು ನ್ಯಾಯಗಳಿಗೆ ನಾವು ಹೋರಾಡದೆ ಮತ್ತಾರು ಹೋರಾಡಬೇಕು?

ಎಷ್ಟೋ ಬಾರಿ ದೀಪದ ಅಡಿಯಲ್ಲಿ ಕತ್ತಲೆ ಇರುವಂತೆ ಸಾಮಾಜಿಕ ನ್ಯಾಯವನ್ನು ಅನುಷ್ಠಾನಗೊಳಿಸುವಲ್ಲಿ ಭ್ರಷ್ಟಾಚಾರ, ಅಧರ್ಮ, ಅನ್ಯಾಯಗಳು ಮುಸುಗಿನಲ್ಲಿ ಕಾರ್ಯನಿರ್ವಹಿಸುತ್ತಿದ್ದು ಬಹುಸಂಖ್ಯಾತ ಜನರು ಶೋಷಣೆಗೆ ಒಳಗಾಗುತ್ತಿರಬಹುದು! ಆದರೆ ತಮ್ಮ ಹಕ್ಕುಗಳಿಗೆ ಹೋರಾಡುವ ದನಿಯನ್ನೇ ಕಳೆದುಕೊಂಡ,

ಯಾರೋ ಬಂದು ತಮ್ಮನ್ನು ಉದ್ಧರಿಸುವರು ಎಂಬ ಪೊಳ್ಳು ನಂಬಿಕೆಗಳನ್ನು ಇಟ್ಟುಕೊಂಡ, ಆಸೆ ಆಮಿಷಗಳಿಗೆ ಬಲಿಯಾಗಿ ತಮ್ಮ ಆತ್ಮಗೌರವವನ್ನು ಕಳೆದುಕೊಂಡ ಜನರು ಸಮಾಜದ ನೀತಿ ನಿಯಮಗಳನ್ನು ಲೇವಡಿ ಮಾಡುತ್ತಾರೆ. ಆದರೆ ಹೀಗೆ ಮಾಡುವ ಮೂಲಕ ತಮ್ಮ ಕಾಲಡಿಯ ನೆಲವನ್ನು ತಾವೇ ಕೆದರಿ ತಮ್ಮ ಸಮಾಧಿಯನ್ನು ತೋಡಿಕೊಳ್ಳುತ್ತಿದ್ದಾರೆ ಎಂಬ ಅರಿವು ಅವರಿಗೆ ಇಲ್ಲ... ಬಹುಶಃ ಅವರು ಮರೆತಿರಬಹುದು.... ನಮ್ಮ ಬದುಕು ಈ ಜಗತ್ತಿನಲ್ಲಿ ಶಾಶ್ವತವಾದದ್ದಲ್ಲ... ಆದರೆ ಅಂತಿಮವಾಗಿ ಸತ್ಯ ನ್ಯಾಯಗಳು ಬದುಕಿನ ಕೊನೆಯವರೆಗೂ ನಮ್ಮನ್ನು ಕಾಯುತ್ತವೆ.

ಮನುಷ್ಯನಾಗಿ ಹುಟ್ಟಿದ ಮೇಲೆ ಆರೋಗ್ಯವಂತ ಸಮಾಜದ ನಾಗರಿಕನಾಗಿ ನಮ್ಮ ನೆಲದ ಕಾನೂನನ್ನು ಈ ಭೂಮಿಯ ಮೇಲೆ ಹುಟ್ಟಿದ ಪ್ರತಿಯೊಬ್ಬರು ಗೌರವಿಸಲೇಬೇಕಾದ್ದು ಅವರ ಕರ್ತವ್ಯ ಮಾತ್ರವಲ್ಲ... ಜವಾಬ್ದಾರಿ ಕೂಡ. 'ಸತ್ಯಮೇವ ಜಯತೆ' ಎಂದು ಹೇಳಿರುವುದು ಈ ಕಾರಣಕ್ಕೆ ಅಲ್ಲವೇ ಸ್ನೇಹಿತರೆ?

# ಏ.26 ರಿಂದ ಜಾನುವಾರುಗಳಿಗೆ ಲಸಿಕಾ ಅಭಿಯಾನ

## ಪಶುಪಾಲನಾ–ಪಶುವೈದ್ಯಕೀಯ ಸೇವಾ ಇಲಾಖೆಯ ಉಪನಿರ್ದೇಶಕ ಡಾ.ಪೋಮ್‌ಸಿಂಗ್ ಹೇಳಿಕೆ

■ **ಹಂಪಿ ಟೈಮ್ಸ್ ಹೊಸಪೇಟೆ**

ಕೇಂದ್ರ ಸರ್ಕಾರದ 2025–26 ನೇ ಸಾಲಿನ ಕಾಲುಬಾಯಿ ಜ್ವರ ರೋಗ ತಡೆಗೆ ಲಸಿಕೆ ಜೊತೆಗೆ ಚರ್ಮಗಂಟು ರೋಗದ ಲಸಿಕೆಯನ್ನು ಏಕಕಾಲದಲ್ಲಿ ಏ.26 ರಿಂದ ಜೂ.9 ರವರೆಗೆ ಒಟ್ಟು 45 ದಿನಗಳ ಕಾಲ ಲಸಿಕಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯ ಉಪನಿರ್ದೇಶಕ ಡಾ.ಪೋಮ್ ಸಿಂಗ್ ತಿಳಿಸಿದ್ದಾರೆ. ಜಾನುವಾರು ಆರೋಗ್ಯ ಮತ್ತು ರೋಗ ನಿಯಂತ್ರಣ ಕಾರ್ಯಕ್ರಮದಡಿಯಲ್ಲಿ 7ನೇ ಸುತ್ತಿನ ಕಾಲು ಬಾಯಿ ರೋಗ ಲಸಿಕಾ ಕಾರ್ಯಕ್ರಮವನ್ನು ಜಿಲ್ಲೆಯ ಎಲ್ಲಾ ಗ್ರಾಮ, ಪಟ್ಟಣ ಮತ್ತು ಎಲ್ಲಾ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಸಾರ್ವಜನಿಕರ ಮನೆ ಬಾಗಿಲಿಗೆ



ತೆರಳಿ ಲಸಿಕೆ ಹಾಕುವ ಕಾರ್ಯಕ್ರಮ ನಡೆಸಲಾಗುತ್ತದೆ. ಕಾಲು ಬಾಯಿ ಜ್ವರವು ಎಲ್ಲಾ ಸೀಳು ಗೊರಸುಳ್ಳ ಪ್ರಾಣಿಗಳಲ್ಲಿ ವೈರಾಣುವಿನಿಂದ ಬರುವ ಕಾಯಿಲೆಯಾಗಿದ್ದು, ಈ ರೋಗವು ಸಾಂಕ್ರಾಮಿಕ ರೋಗವಾಗಿದ್ದು, ಗಾಳಿ ಮೂಲಕ ಹರಡುತ್ತದೆ. ಈ ರೋಗದಿಂದ ದನ ಹಾಗೂ ಎಮ್ಮೆಗಳಲ್ಲಿ ಕಾಲು ಮತ್ತು ಬಾಯಿಗಳಲ್ಲಿ ಗಾಯವಾಗಿ ಅಪಾರವಾಗಿ ಬಳಲುವಿಕೆ, ನಿಶ್ಯಕ್ತಿ, ಕಡಿಮೆ ಹಾಲಿನ ಇಳುವರಿ ಮೂಲಕ ರೈತರ ಆರ್ಥಿಕ ಹಾನಿಗೆ ಕಾರಣವಾಗುತ್ತದೆ. ಹಾಗಾಗೀ ಜಿಲ್ಲೆಯ ಎಲ್ಲಾ 92 ಇಲಾಖೆ ಸಂಸ್ಥೆಗಳಲ್ಲಿ ಏಕಕಾಲದಲ್ಲಿ ಪ್ರಾರಂಭವಾಗಲಿದ್ದು, 45 ಪಶುವೈದ್ಯಾಧಿಕಾರಿಗಳು ಮತ್ತು 10 ಗುತ್ತಿಗೆ ಆಧಾರಿತ ಪಶುವೈದ್ಯಾಧಿಕಾರಿಗಳು, 157 ಇಲಾಖಾ ಸಿಬ್ಬಂದಿಗಳೊಂದಿಗೆ, 81 ಜನ ಹೊರಗುತ್ತಿಗೆ ಹಾಗೂ ಮೈತ್ರಿ ಕಾರ್ಯ ಕರ್ತರು ಸೇರಿದಂತೆ 238 ಲಸಿಕೆದಾರರು ಲಸಿಕೆ ಹಾಕುವ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ. ಜಾನುವಾರು ಸಾಕಣಿ ದಾರರು, ಸಾರ್ವಜನಿಕರು ಲಸಿಕಾ ಕಾರ್ಯಕ್ರಮವನ್ನು ಸದುಪಯೋಗಪಡಿಸಿಕೊಳ್ಳಬೇಕೆಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಗುಳೆ ಲಕ್ಕಮ್ಮ ದೇವಿ ಜಾತ್ರೆ

ಮೊದಲ ಪುಟದಿಂದ

ಲಕ್ಕಮ್ಮನ ಹೊತ್ತ ಅರ್ಚಕ ಅಲ್ಲಿ ದೇವಿಯನ್ನು ಪ್ರತಿಷ್ಠಾಪಿಸಿದರು. ಗೋವಿಂದಗಿರಿ ಗ್ರಾಮದ ಭಕ್ತರು ದೇವಿಗೆ ಹೂ,ಹಣ್ಣು, ನೈವೇದ್ಯ ಅರ್ಪಿಸಿದರು. ದೇವಿ ಮರದ ಸುತ್ತ,ಮುತ್ತಲಿನಲ್ಲಿ ಬೀಡು ಬಿಟ್ಟಿದ್ದ ಭಕ್ತರು ಸಿಹಿ ಆಹಾರ, ಮಾಂಸಾಹಾರ ಅಡುಗೆಯನ್ನು ದೇವಿಗೆ ನೈವೇದ್ಯ ಮಾಡಿ, ಕುಟುಂಬ ಹಾಗೂ ಸ್ನೇಹಿತರ ಜತೆ ಸಾಮೂಹಿಕ ಭೋಜನ ಮಾಡಿ ಸಂಭ್ರಮಿಸಿದರು. ಸಂಜೆ 4 ಗಂಟೆಯಾಗುತ್ತಲೆ ಮತ್ತೆ ದೇವಿಯನ್ನು ಪಟ್ಟಣಕ್ಕೆ ಕರೆದ್ಯೋಯಲು ಅಣಿಯಾಗಿ, ಅರ್ಚಕ ಮತ್ತೆ ದೇವಿಹೊತ್ತು ಭಕ್ತರ ಹರ್ಷೋದ್ಗಾರಗಳ ಮೂಲಕ ಮೆರವಣಿಗೆ ಮಾಡುತ್ತು ವಾಪಸು ಪಟ್ಟಣಕ್ಕೆ ಬಂದರು. ಈ ವೇಳೆ ಬೆಳಿಗ್ಗೆ ಪಟ್ಟಣ ಖಾಲಿಯಾಗುತ್ತಲೆ ಇಡೀ ಪಟ್ಟಣವನ್ನು ಕಾಯುವ ಜವಾಬ್ದಾರಿ ಹೊತ್ತ ಮುಸ್ಲಿಂ ಸಮುದಾಯದ ಮಣೆಗಾರ ಅಮೀರ್ ಊರ ದ್ವಾರ ಬಾಗಿಲಿನಲ್ಲಿ ಪಾರಿಬೇಲಿ ತಗೆದು ಬೆಂಕಿ ಕುಂಡವನ್ನು ಹಾಕಿದ್ದನು. ದೇವಿ ಮೂಲ ಸ್ಥಾನಕ್ಕೆ ಬಂದು ದೇವಸ್ಥಾನದಲ್ಲಿ ಕೂತ ನಂತರ ಭಕ್ತರು ಬೆಂಕಿಯನ್ನು ಸಗಣಿ ಕುಳ್ಳಿನ ಮೂಲಕ ತೆಗೆದುಕೊಂಡು ಹೋಗಿ ಮನೆಯ ಬಾಗಿಲು ತಗೆದು ಪೂಜೆ ಮಾಡಿ ಬಾಗಿಲಿಗೆ ಕಾಯಿ ಹೊಡೆದು ದೀಪ ಬೆಳಗಿ ಜಾತ್ರೆಯನ್ನು ಸಂಪನ್ನಗೊಳಿಸಿದರು.


# ದಿನಪತ್ರಿಕೆ ಜಾಹೀರಾತಿನ ಮಹತ್ವ !

**ನೇರ ಗ್ರಾಹಕ ತಲುಪುವಿಕೆ :** ದಿನಪತ್ರಿಕೆಗಳು ನಿತ್ಯ ಓದುಗರನ್ನು ಹೊಂದಿರುವ ವಿಶ್ವಾಸಾರ್ಹ ಮಾಧ್ಯಮ. ಸ್ಥಳೀಯ ಹಾಗೂ ಪ್ರಾದೇಶಿಕ ಮಟ್ಟದ ವ್ಯಾಪಾರ, ಆಫರ್‌ಗಳನ್ನು ಪತ್ರಿಕೆಗಳಲ್ಲಿ ಜಾಹೀರಾತು ನೀಡಿ ನೇರವಾಗಿ ಹೊಸ ಗ್ರಾಹಕರನ್ನು ತಲುಪಬಹುದು.

**ಸ್ಥಳೀಯ ವ್ಯಾಪಾರಗಳಿಗೆ ಹೆಚ್ಚು ಲಾಭ :** ಕಿರಾಣಿ ಅಂಗಡಿ, ವಾಹನ ಶೋರೂಮ್, ವೈದ್ಯಕೀಯ ಸೇವೆ ಅಥವಾ ಹೊಸ ವ್ಯಾಪಾರ ಆರಂಭಿಸಿ ದಾಗ, ಸ್ಥಳೀಯ ದಿನಪತ್ರಿಕೆಯಲ್ಲಿ ಜಾಹೀರಾತು ನೀಡುವುದು, ಸಮೀಪದ ಗ್ರಾಹಕರ ಗಮನ ಸೆಳೆಯಲು ಅತ್ಯಂತ ಪರಿಣಾಮಕಾರಿ ಮಾರ್ಗ.

**ವಿಶ್ವಾಸಾರ್ಹತೆ:** ಪತ್ರಿಕೆಗಳಲ್ಲಿ ಪ್ರಕಟವಾಗುವ ಜಾಹೀರಾತುಗಳು ಜನರ ಮನಸ್ಸಿನಲ್ಲಿ ಹೆಚ್ಚು ನಂಬಿಕೆ ಮೂಡಿಸುತ್ತವೆ. ಏಕೆಂದರೆ ಜನರು ಪತ್ರಿಕೆಯನ್ನು ನಿತ್ಯದ ಮಾಹಿತಿಯ ಮೂಲವೆಂದು ನಂಬಿರುತ್ತಾರೆ.

**ಕಡಿಮೆ ವೆಚ್ಚ – ಹೆಚ್ಚು ಪರಿಣಾಮ:** ಇತರೆ ಮಾಧ್ಯಮಗಳ ಜಾಹೀರಾತಿಗಿಂತ, ಸ್ಥಳೀಯ ದಿನಪತ್ರಿಕೆ ಜಾಹೀರಾತು ಕಡಿಮೆ ವೆಚ್ಚದಲ್ಲಿ ಹೆಚ್ಚು ಓದುಗರನ್ನು ತಲುಪಬಲ್ಲದು. ವಿಶೇಷವಾಗಿ, classifieds ಅಥವಾ local inserts ನಂತಹ ಆಯ್ಕೆಗಳು ಸಣ್ಣ ವ್ಯಾಪಾರಗಳಿಗೆ ಉತ್ತಮ.

**ವಿನ್ಯಾಸದ ಸ್ವಾತಂತ್ರ್ಯ:** ಪತ್ರಿಕೆಗಳಲ್ಲಿ ವಿವಿಧ ಮಾದರಿಯ ಜಾಹೀರಾತು ವಿನ್ಯಾಸಗಳ (text ad, image ad, strip ad, full page ad) ಮೂಲಕ ನಿಮ್ಮ ಸೇವೆ/ ಉತ್ಪನ್ನವನ್ನು ಎಫೆಕ್ಟಿವ್ ಆಗಿ ಪ್ರದರ್ಶಿಸಬಹುದು.

ವಿಜಯನಗರ ಜಿಲ್ಲೆಯ ಹಂಪಿ ಟೈಮ್ಸ್ ಪ್ರಿಂಟ್ ಮತ್ತು ಡಿಜಿಟಲ್ ದಿನಪತ್ರಿಕೆಯಲ್ಲಿ ಜಾಹೀರಾತು ನೀಡಲಿಚ್ಛಿಸುವವರು ಮೊ: 9448633038ಗೆ ಸಂಪರ್ಕಿಸಿ.


## ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಹೊಸಪೇಟೆ

ಡ್ಯಾಂ ರಸ್ತೆ, ಹೊಸಪೇಟೆ–583203, ವಿಜಯನಗರ (ಜಿಲ್ಲೆ)
(ದೂ&ಫ್ಯಾ):08394 231652, ಸ್ಥಾಪನೆ: 1973, email:apmchospet@rediff.com

ಸಂಖ್ಯೆ:ಕೃಉಮಾಸ/ಹೊ/ನಿವೇಶನ/20/2025–26 ದಿನಾಂಕ:23/04/2025

### ಪ್ರಕಟಣೆ

ಈ ಮೂಲಕ ಸಮಸ್ತ ಪೇಟೆ ಕಾರ್ಯಕರ್ತರುಗಳಿಗೆ, ರೈತರಿಗೆ, ಸಾರ್ವಜನಿಕರಿಗೆ ಹಾಗೂ ಬಾಧಿತರಾಗುವವರಿಗೆ ತಿಳಿಯಪಡಿಸುವುದೇನೆಂದರೆ, ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿರುವ ಈ ಕೆಳಕಂಡ ನಿವೇಶ ಸಹಿತ ಅಂಗಡಿ–ವ–ಗೋದಾಮು ಕಟ್ಟಡವನ್ನು ಮಾರಾಟ/ ಖರೀದಿ ಪ್ರಕ್ರಿಯೆಗೆ ಅನುಮತಿ ಕೋರಿ ಈ ಕೆಳಕಾಣಿಸಿದ ಪೇಟೆ ಕಾರ್ಯನಿರ್ವಾಹಕರು ಅರ್ಜಿ ಸಲ್ಲಿಸಿರುತ್ತಾರೆ.

| ಕ್ರ.ಸಂ. | ನಿವೇಶನ ಸಂಖ್ಯೆ ಅಳತೆ | ಮಾರಾಟ ಮಾಡುವವರು | ಖರೀದಿ ಮಾಡುವವರು |
|---|---|---|---|
| 1 | 43–ಎ (105X20 ಅಡಿ) | ಶ್ರೀ ವಿಜಯಲಕ್ಷ್ಮೀ ಟ್ರೇಡರ್ಸ್ ಮಾಲಿಕರು ॥ ಎಂ.ಶಿವರಾಜ್ ತಂದೆ ಮಾಣಿಕ್ಯಂ ಶೆಟ್ಟಿ ಹೊಸಪೇಟೆ. | ಶ್ರೀ ಬಿ.ಎಂ.ವೆಜಿಟೇಬಲ್ ಟ್ರೇಡರ್ಸ್ ತರಕಾರಿ ದಲ್ಲಾಲಿ ವರ್ತಕರು ಮಾಲಿಕರು ॥ ಶ್ರೀ ಮಾಲೆಕೊಪ್ಪ ಶಿರಾಜ್ ಅಹಮದ್ ತಂದೆ ಶಬ್ಬೀರ್ ಅಹಮದ್, ಹೊಸಪೇಟೆ. |

ಆದ್ದರಿಂದ ಈ ಉಭಯ ಪೇಟೆ ಕಾರ್ಯಕರ್ತರು, ಕೃಷಿ ಉತ್ಪನ್ನಗಳ ಮೇಲೆ ಮಾಡಿದ ಖರೀದಿ ವ್ಯವಹಾರಕ್ಕೆ ಸಂಬಂಧಿಸಿದಂತೆ ಬಾಕಿ ಹಣವನ್ನು ಪಾವತಿಸುವುದು ಉಳಿಸಿಕೊಂಡಿದ್ದಲ್ಲಿ, ಅಥವಾ ಇನ್ನಾವುದೇ ಬಾಕಿ, ತಂಟೆ/ತಕರಾರು, ಸಲಹೆ–ಸೂಚನೆಗಳಿದ್ದಲ್ಲಿ, ಈ ಪ್ರಕಟಣೆ ಹೊರಡಿಸಿದ ದಿನಾಂಕದಿಂದ 15 ದಿನದೊಳಗಾಗಿ ಸಮಿತಿಗೆ ಲಿಖಿತ ಅರ್ಜಿ ಮೂಲಕ ತಿಳಿಸತಕ್ಕದ್ದು. ನಿಗದಿತ ಅವಧಿ ಮೀರಿ ಬಂದ ಮನವಿಗಳನ್ನು ಪರಿಗಣಿಸಲಾಗುವುದಿಲ್ಲ. ಒಂದು ವೇಳೆ ಈ ಬಗ್ಗೆ ಯಾವುದೇ ಲಿಖಿತ ಮನವಿ ಬಾರದಿದ್ದಲ್ಲಿ, ಈ ನಿವೇಶನವನ್ನು ಕಟ್ಟಡ ಸೇರಿದಂತೆ ಮಾರಾಟ/ಖರೀದಿ ಪ್ರಕ್ರಿಯೆಯನ್ನು ಮಾಡಲು ಆಸ್ತಿ ಹಂಚಿಕೆ ನಿಯಮಾವಳಿ 2004ರ ಪ್ರಕಾರ ಮುಂದಿನ ಕ್ರಮ ಜರುಗಿಸಲಾಗುವುದೆಂದು ಈ ಮೂಲಕ ತಿಳಿಯಪಡಿಸಿದೆ.

ಸಹಿ/– **ಕಾರ್ಯದರ್ಶಿ**
**ಕೃ.ಉ.ಮಾ.ಸ.ಹೊಸಪೇಟೆ**

ಸಹಿ/– **ಆಡಳಿತಾಧಿಕಾರಿಗಳು**
**ಕೃ.ಉ.ಮಾ.ಸ.ಹೊಸಪೇಟೆ**





# ಶುದ್ಧೀಕರಿಸಿದ ನೀರು ಪೂರೈಸಿ

## ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಡಾ.ಕೆ.ವಿ. ತ್ರಿಲೋಕಚಂದ್ರ ಸೂಚನೆ | ಕೆಡಿಪಿ ಪ್ರಗತಿ ಪರಿಶೀಲನಾ ಸಭೆ

■ **ಹಂಪಿ ಟೈಮ್ಸ್ ಬಳ್ಳಾರಿ**

ಬೇಸಿಗೆಯಲ್ಲಿ ಜಿಲ್ಲೆಯ ಎಲ್ಲಾ ಗ್ರಾಪಂ ವ್ಯಾಪ್ತಿಯ ಹಳ್ಳಿಗಳಲ್ಲಿ ಸಮರ್ಪಕವಾಗಿ ಕ್ಲೋರಿನೇಷನ್ ನೊಂದಿಗೆ ಶುದ್ಧೀಕರಣಗೊಳಿಸಿದ ನೀರು ಪೂರೈಕೆಗೆ ಆದ್ಯತೆ ನೀಡಬೇಕು ಎಂದು ಶಾಲಾ ಶಿಕ್ಷಣ ಇಲಾಖೆಯ ಆಯುಕ್ತರು ಹಾಗೂ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳಾದ ಡಾ.ಕೆ.ವಿ. ತ್ರಿಲೋಕಚಂದ್ರ ಅಧಿಕಾರಿಗಳಿಗೆ ಸೂಚಿಸಿದರು.

ನಗರದ ಜಿಲ್ಲಾ ಪಂಚಾಯತ್ ನ ಅಬ್ದುಲ್ ನಜೀರ್ ಸಾಬ್ ಸಭಾಂಗಣದಲ್ಲಿ ಬುಧವಾರ ಏರ್ಪಡಿಸಿದ್ದ ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮದ (20 ಅಂಶ ಸೇರಿದಂತೆ) ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

**ನೀರಿನ ಮೂಲ ಪರಿಶೀಲಿಸಿ, ಓಹೆಚ್‌ಟಿ ಸ್ವಚ್ಛಗೊಳಿಸಿ:** ಬೇಸಿಗೆಯಲ್ಲಿ ಸಾರ್ವಜನಿಕರಿಗೆ ಕುಡಿಯುವ ನೀರಿಗೆ ವ್ಯತ್ಯವಾಗಬಾರದು. ಯಾವುದೇ ಕಾರಣಕ್ಕೂ ಕಲುಷಿತ ನೀರು ಪೂರೈಕೆಯಾಗಬಾರದು. ಇದರ ಬಗ್ಗೆ ಎಚ್ಚರ ವಹಿಸಬೇಕು. ನಿರಂತರವಾಗಿ ನೀರಿನ ಮೂಲಗಳನ್ನು ಪರಿಶೀಲನೆ ನಡೆಸುತ್ತಿರಬೇಕು. ನೀರಿನ ಸಂಗ್ರಹಾಗಾರಗಳನ್ನು ಶುಚಿಗೊಳಿಸುತ್ತಿರಬೇಕು. ನೀರಿನ ಮಾದರಿಗಳನ್ನು ಪರೀಕ್ಷೆಗೆ ಒಳಪಡಿಸಿದ ನಂತರವೇ ಸರಬರಾಜು ಮಾಡಬೇಕು ಮತ್ತು ಓವರ್ ಹೆಡ್ ಟ್ಯಾಂಕ್ ಗಳ ಮುಚ್ಚಳ ಮುಚ್ಚಲಾಗುತ್ತಿದೆಯೇ ಎಂಬುದನ್ನು ಖಾತ್ರಿ ಪಡಿಸಿಕೊಳ್ಳಬೇಕು ಎಂದು ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಜಿಲ್ಲೆಯಲ್ಲಿ ಕುಡಿಯುವ ನೀರಿನ ಪೂರೈಕೆಯಲ್ಲಿ ವ್ಯತ್ಯಯವಾಗಬಹುದಾದಂತಹ 82 ಹಳ್ಳಿಗಳನ್ನು ಗುರುತಿಸಿದ್ದು, ಈಗಾಗಲೇ ಕುಡಿಯುವ ನೀರು ಪೂರೈಕೆಗೆ ಟ್ಯಾಂಕರ್ ಗಳನ್ನು ಸಿದ್ಧತೆಯಲ್ಲಿಟ್ಟು



ಕೊಳ್ಳಲಾಗಿದೆ ಎಂದು ಗ್ರಾಮೀಣ ಕುಡಿಯುವ ನೀರು ಸರಬರಾಜು ಮತ್ತು ನೈರ್ಮಲ್ಯ ಇಲಾಖೆಯ ಕಾರ್ಯಪಾಲಕ ಇಂಜಿನಿಯರ್ ಇಂದುಧರ್ ಸಭೆಗೆ ತಿಳಿಸಿದರು.

ಶುದ್ಧ ಕುಡಿಯುವ ನೀರು ಸೇವನೆ ಕುರಿತು ಸಾರ್ವಜನಿಕರಿಗೆ ಜನಸಂದಣಿ ಇರುವ ಸ್ಥಳ, ಜಾತ್ರಾ ಸಂದರ್ಭಗಳಲ್ಲಿ ಅರಿವು ಮೂಡಿಸುವ ಕಾರ್ಯ ಕೈಗೊಳ್ಳಬೇಕು ಜಿಲ್ಲಾ ಆರೋಗ್ಯಾಧಿಕಾರಿಗಳಿಗೆ ಸೂಚಿಸಿದ ಅವರು, ಗ್ರಾಮಗಳಲ್ಲಿ ತುರ್ತು ಆರೋಗ್ಯ ಸೇವೆಗಳಿಗಾಗಿ ಬರುವ ರೋಗಿಗಳನ್ನು ಪ್ರತಿ ಬಾರಿಯೂ ಜಿಲ್ಲಾ ಕೇಂದ್ರಗಳಿಗೆ ತೆರಳುವಂತೆ ಶಿಫಾರಸ್ಸು ಮಾಡುವುದು ಸಮಂಜಸವಲ್ಲ; ತಪಾಸಣೆ ಕೈಗೊಳ್ಳಬೇಕು. ಸಾರ್ವಜನಿಕರಿಗೆ ತಾವಿರುವಲ್ಲಿಯೇ ಆರೋಗ್ಯ ಸೇವೆ ನೀಡಬೇಕು. ಇದಕ್ಕೆ ಸಾಕಷ್ಟು ಮಾನವ ಸಂಪನ್ಮೂಲಗಳನ್ನು ಒದಗಿಸಲಾಗುತ್ತಿದೆ ಎಂದು ಹೇಳಿದರು.

ಜಿಲ್ಲೆಯಲ್ಲಿ ಗರ್ಭಿಣಿ ಮಹಿಳೆಯರಲ್ಲಿ ಅಧಿಕ ರಕ್ತದೊತ್ತಡ, ಅನೀಮಿಯಾ ತಡೆಗಟ್ಟಲು ಸೂಕ್ತ ಕಾರ್ಯಯೋಜನೆ ರೂಪಿಸಬೇಕು. ಗರ್ಭಿಣಿ ಮಹಿಳೆಯರಿಗೆ ಸೇವಿಸಲು ಆರೋಗ್ಯ ಇಲಾಖೆಯಿಂದ ನೀಡಲಾಗುವ ಕಬ್ಬಿಣಾಂಶ ಮಾತ್ರೆಗಳ ಸೇವನೆ ಕುರಿತು ಆಶಾ ಮತ್ತು ಅಂಗನವಾಡಿ ಕಾರ್ಯಕರ್ತೆಯರು ಮನೆ ಭೇಟಿ ನಡೆಸಿ ಖಚಿತಪಡಿಸಿಕೊಳ್ಳಬೇಕು. ಇದರಿಂದ ಸುಲಭ ಮತ್ತು ಸಾಮಾನ್ಯ ಹೆರಿಗೆಗೆ ಸಹಾಯಕವಾಗಲಿದೆ ಎಂದು ತಿಳಿಸಿದರು.

ಜಿಲ್ಲೆಯಲ್ಲಿ ಕಳಪೆ ಗುಣಮಟ್ಟದ ಬಿತ್ತನೆ ಬೀಜ ವಿತರಣೆಯಾಗಿರುವ ಬಗ್ಗೆ ಹಾಗೂ ರೈತರ ಫಸಲಿನಲ್ಲಿ ಇಳುವರಿ ಬಾರದೇ ಇರುವ ಬಗ್ಗೆ ದೂರುಗಳು ಕೇಳಿಬರುತ್ತಿದೆ. ಈ ಕುರಿತು ಕೃಷಿ ಅಧಿಕಾರಿಗಳು ರೈತರಿಗೆ ಬಿತ್ತನೆ ಬೀಜ, ರಸಗೊಬ್ಬರ ಮತ್ತು ಕೀಟನಾಶಕಗಳ ಪೂರೈಕೆ ಮಾಡುತ್ತಿರುವ ಅನಧಿಕೃತ ರಸಗೊಬ್ಬರದ ಅಂಗಡಿಗಳ ಮೇಲೆ ದಾಳಿ ನಡೆಸಿ ಕಾನೂನಿನ್ವಯ ಸೂಕ್ತ ಕ್ರಮ ಕೈಗೊಳ್ಳಬೇಕು. ಈ ಕುರಿತು ರೈತರಿಗೆ ಗುಣಮಟ್ಟದ ಬೀಜ ಮತ್ತು ರಸಗೊಬ್ಬರಗಳ ಕುರಿತು ಅರಿವು ಮೂಡಿಸಬೇಕು ಎಂದು ತಿಳಿಸಿದರು.

ಜಿಲ್ಲೆಯಲ್ಲಿ ಜಾನುವಾರುಗಳಿಗೆ ಮೇವಿನ ಕೊರತೆಯಾಗಬಾರದು. ಈಗಾಗಲೇ ಇರುವ ಮೇವಿನ ಬ್ಯಾಂಕ್ ಗಳಲ್ಲಿ ಮೇವು ದಾಸ್ತಾನು ಇಟ್ಟುಕೊಳ್ಳಬೇಕು ಎಂದು ಸೂಚಿಸಿದ ಅವರು, ಪಶು ವೈದ್ಯಾಧಿಕಾರಿಗಳಿಂದ ಜಿಲ್ಲೆಯಲ್ಲಿ ಮೇವಿನ ಲಭ್ಯತೆ ಕುರಿತು ಮಾಹಿತಿ ಪಡೆದುಕೊಂಡರು.

ಸಂಡೂರು ತಾಲ್ಲೂಕು ವ್ಯಾಪ್ತಿಯಲ್ಲಿ ಕಳೆದ ವಾರ ಅಕಾಲಿಕ ಗಾಳಿ–ಮಳೆಯಿಂದಾಗಿ ಬಾಳೆ ಬೆಳೆಯು ನೆಲಕ್ಕುರುಳಿರುವ ಕುರಿತು ವರದಿಯಾಗಿದೆ. ಈ ಕುರಿತು ತೋಟಗಾರಿಕೆ ಅಧಿಕಾರಿಗಳಿಗೆ ಪ್ರಶ್ನಿಸಿದರು, ಈ ಕುರಿತು ನಿಯಮಾನುಸಾರ ಬೆಳೆ ಪರಿಹಾರ ಒದಗಿಸಲು ಕ್ರಮ ವಹಿಸುವಂತೆ ತಾಲ್ಲೂಕು ತಹಶೀಲ್ದಾರರಿಗೆ ನಿರ್ದೇಶನ ನೀಡಲಾಗಿದೆ ಎಂದು ತೋಟಗಾರಿಕೆ ಉಪ ನಿರ್ದೇಶಕರು ಸಭೆಗೆ ತಿಳಿಸಿದರು.

ಜಿಲ್ಲೆಯಲ್ಲಿ ಹೈನುಗಾರಿಕೆಗೆ ಉತ್ತೇಜನ ನೀಡಬೇಕು. ಜಿಲ್ಲೆಯಲ್ಲಿ ಕಾಮಗಾರಿಗಳು ಗುಣಮಟ್ಟದ್ದಾಗಿ ರಬೇಕು. ರಾಷ್ಟ್ರೀಯ ಹೆದ್ದಾರಿ ರಸ್ತೆ ಕಾಮಗಾರಿಗಳಿಗೆ ಚುರುಕು ನೀಡಿ, ಕಾಮಗಾರಿ ಪೂರ್ಣಗೊಳಿಸಬೇಕು ಎಂದು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚನೆ ನೀಡಿದರು. ಜಿಲ್ಲೆಯಲ್ಲಿನ ಸಮಾಜ ಕಲ್ಯಾಣ ಇಲಾಖೆ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಪರಿಶಿಷ್ಟ ವರ್ಗಗಳ ಕಲ್ಯಾಣ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಡಿ ಬರುವ ವಸತಿ ನಿಲಯಗಳ ಕಟ್ಟಡ, ನಿರ್ವಹಣೆ, ಕುಡಿಯುವ ನೀರು, ಶೌಚಾಲಯ ವ್ಯವಸ್ಥೆ ಮತ್ತು ಇತರೆ ವ್ಯವಸ್ಥೆಗಳ ಕುರಿತು ಅಧಿಕಾರಿಗಳಿಂದ ಮಾಹಿತಿ ಪಡೆದು, ಸೂಕ್ತ ಸಲಹೆ–ಸೂಚನೆ ನೀಡಿದರು.

ಸಭೆಯಲ್ಲಿ ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮಹಮ್ಮದ್ ಹ್ಯಾರಿಸ್ ಸುಮೈರ್, ಸಹಾಯಕ ಆಯುಕ್ತ ಪಿ.ಪ್ರಮೋದ್, ಜಿಲ್ಲಾ ಖನಿಜ ಪ್ರತಿಷ್ಠಾನದ ವಿಶೇಷ ಅಧಿಕಾರಿ ಪಿ.ಎಸ್.ಮಂಜುನಾಥ, ಜಿಪಂ ಉಪಕಾರ್ಯದರ್ಶಿ ಗಿರಿಜಾ ಶಂಕರ್ ಸೇರಿದಂತೆ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ವಿವಿಧ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.

# ವಾರ್ತಾ ಇಲಾಖೆಯಿಂದ ಡಿಜಿಟಲ್ ಜಾಹೀರಾತಿಗೆ ಮಾಧ್ಯಮ, ಏಜೆನ್ಸಿಗಳ ನೋಂದಣಿಗೆ ಅರ್ಜಿ ಆಹ್ವಾನ

■ **ಹಂಪಿ ಟೈಮ್ಸ್ ಬಳ್ಳಾರಿ**

ಸರ್ಕಾರದ ನೀತಿ ಮತ್ತು ಯೋಜನೆಗಳನ್ನು ಅಂತರ್ಜಾಲ ಬಳಸುವ ಜನರಿಗೆ ಡಿಜಿಟಲ್ ಜಾಹೀರಾತುಗಳ ಮೂಲಕ ತಲುಪಿಸಲು ವಾರ್ತಾ



ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯು ಕರ್ನಾಟಕ ಡಿಜಿಟಲ್ ಜಾಹೀರಾತು ಮಾರ್ಗಸೂಚಿ–2024 ಅನ್ನು ಜಾರಿಗೆ ತಂದಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಿಳಿಸಿದ್ದಾರೆ.

ಕರ್ನಾಟಕ ಸರ್ಕಾರವು ಡಿಜಿಟಲ್ ಜಾಹೀರಾತಿಗಾಗಿ ಡಿಜಿಟಲ್ ಜಾಹೀರಾತು ಏಜೆನ್ಸಿ ಮತ್ತು ಡಿಜಿಟಲ್ ಮಾಧ್ಯಮಗಳನ್ನು ಎಂಪ್ಯಾನಲ್ ಮೆಂಟ್ ಮಾಡಿಕೊಳ್ಳುತ್ತಿದೆ. ದೇಶದಲ್ಲಿಯೇ ಮೊದಲ ಬಾರಿಗೆ ಡಿಜಿಟಲ್ ಏಜೆನ್ಸಿ ಮತ್ತು ಮಾಧ್ಯಮಗಳನ್ನು ನೋಂದಾಯಿಸಿಕೊಳ್ಳಲಾಗುತ್ತಿದೆ ಎಂದು ಮುಖ್ಯಮಂತ್ರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕೆಲವು ವರ್ಷಗಳಿಂದ ಮಾಧ್ಯಮದ ವ್ಯಾಪ್ತಿ ಮತ್ತು ಸ್ವರೂಪ ಬದಲಾಗಿದೆ. ಅಂತರ್ಜಾಲ, ಖಾಸಗಿ ಕಂಪ್ಯೂಟರ್, ಸ್ಮಾರ್ಟ್ ಟಿವಿ ಹಾಗೂ ಸ್ಮಾರ್ಟ್ ಫೋನ್, ಸಾಮಾಜಿಕ ಜಾಲತಾಣಗಳ ಬಳಕೆ ಹೆಚ್ಚಾಗಿದೆ. ಸಾಂಪ್ರದಾಯಿಕ ಜಾಹೀರಾತುಗಳಿಗಿಂತ ಡಿಜಿಟಲ್ ಜಾಹೀರಾತು ಹೆಚ್ಚು ಪ್ರಭಾವಶಾಲಿಯಾಗಿದೆ. ಜೊತೆಗೆ, ಹೆಚ್ಚು ವ್ಯಾಪ್ತಿ ಮತ್ತು ನಿರ್ದಿಷ್ಟ ಜನರನ್ನು ತಲುಪುತ್ತಿದೆ. ಈ ಹಿನ್ನೆಲೆಯಲ್ಲಿ ಸರ್ಕಾರದ ಕಾರ್ಯಕ್ರಮಗಳು ಮತ್ತು ನೀತಿಗಳ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸಲು ಹಾಗೂ ಮಾಹಿತಿ, ಶಿಕ್ಷಣ ಮತ್ತು ಸಂವಹನ (ಐಇಸಿ) ಮಾದರಿಯಲ್ಲಿ ಡಿಜಿಟಲ್ ಜಾಹೀರಾತು ನೀಡಲು ಕರ್ನಾಟಕ ಡಿಜಿಟಲ್ ಜಾಹೀರಾತು ಮಾರ್ಗಸೂಚಿಯನ್ನು ಸರ್ಕಾರ ಹೊರತಂದಿದೆ ಎಂದು ತಿಳಿಸಿದ್ದಾರೆ.

ಹೊಸ ಕರ್ನಾಟಕ ಡಿಜಿಟಲ್ ಜಾಹೀರಾತು ಮಾರ್ಗಸೂಚಿ ಅನ್ವಯ ಎಲ್ಲಾ ಇಲಾಖೆಗಳು, ನಿಗಮಗಳು, ಪ್ರಾಧಿಕಾರಗಳು, ಮಂಡಳಿಗಳು, ಸ್ಥಳೀಯಾಡಳಿತಗಳು, ಪುರಸಭೆಗಳು, ನಗರ ಪಾಲಿಕೆಗಳು ಮೊದಲಾದವುಗಳಲ್ಲಿ ಡಿಜಿಟಲ್ ಜಾಹೀರಾತುಗಳನ್ನು ಕಡ್ಡಾಯವಾಗಿ ಈ ಮಾರ್ಗಸೂಚಿಗೆ ಅನುಸಾರವಾಗಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಮೂಲಕ ಬಿಡುಗಡೆ / ಪೂರೈಸಬೇಕಾಗಿದೆ ಎಂದು ಮುಖ್ಯಮಂತ್ರಿಗಳು ತಿಳಿಸಿದ್ದಾರೆ.

ಕರ್ನಾಟಕ ಡಿಜಿಟಲ್ ಜಾಹೀರಾತು ಮಾರ್ಗಸೂಚಿ ಅನ್ವಯ ವೀಡಿಯೊ ಸ್ಟ್ರೀಮಿಂಗ್ ಪ್ಲಾಟ್‌ಫಾರ್ಮ್‌ಗಳಾದ ಗೂಗಲ್ (ಯೂಟ್ಯೂಬ್), ಮೆಟಾ (ಫೇಸ್‌ಬುಕ್, ಇನ್‌ಸ್ಟಾಗ್ರಾಂ, ವಾಟ್ಸಾಪ್ ಬಿಸಿನೆಸ್, ವಾಟ್ಸಾಪ್ ಚಾನಲ್), ಸರ್ಚ್ ಇಂಜಿನ್‌ಗಳಾದ ಗೂಗಲ್, ಬಿಂಗ್, ಸಾಮಾಜಿಕ ಜಾಲತಾಣಗಳಾದ ಎಕ್ಸ್ (ಈ ಹಿಂದೆ ಟ್ವಿಟರ್), ಫೇಸ್‌ಬುಕ್, ಇನ್‌ಸ್ಟಾಗ್ರಾಂ, ಲಿಂಕ್ಡ್‌ಇನ್, ವಾಟ್ಸಾಪ್, ಸ್ನಾಪ್‌ಚಾಟ್, ಟೆಲಿಗ್ರಾಂ, ಒಟಿಟಿ ಪ್ಲಾಟ್‌ಫಾರ್ಮ್‌ಗಳಾದ ನೆಟ್‌ಫ್ಲಿಕ್ಸ್, ಅಮೇಜಾನ್ ಪ್ರೈಮ್, ಡಿಸ್ನಿ ಹಾಟ್‌ಸ್ಟಾರ್ ಸೋನಿಲೈವ್, ಜಿಯೋ ಸಿನಿಮಾ, ಜೀ 5, ವೂಟ್, ಸನ್ ನೆಕ್ಸ್ಟ್ ಮತ್ತು ಟಾಕೀಸ್, ಫಿನ್‌ಟೆಕ್ ಪ್ಲಾಟ್‌ಫಾರ್ಮ್‌ಗಳಾದ ಪೇಟಿಎಂ, ಫೋನ್‌ಪೇ ಮತ್ತು ಜಿಪೇ ಸೇರಿದಂತೆ ಇನ್ನಿತರ ಡಿಜಿಟಲ್ ವೇದಿಕೆಗಳಡಿ ಜಾಹೀರಾತು ಅರ್ಹ ಏಜೆನ್ಸಿಗಳ ಮೂಲಕ ನೀಡಲು ಅವುಗಳನ್ನು ಎಂಪ್ಯಾನಲ್ ಮಾಡಿಕೊಳ್ಳಲು ವಾರ್ತಾ ಇಲಾಖೆಯು ಉದ್ದೇಶಿಸಿದೆ.

ಹಾಗೆಯೇ, ಅಪ್ಲಿಕೇಶನ್ ಡೌನ್‌ಲೋಡ್ ಪ್ಲಾಟ್‌ಫಾರ್ಮ್ ಅಡಿಯಲ್ಲಿ ಬರುವ ವೀಡಿಯೊ, ಡಿಸ್‌ಪ್ಲೇ ಮತ್ತು ಸರ್ಚ್ ಸೇರಿದಂತೆ ವಿವಿಧ ವೇದಿಕೆಗಳಡಿ ಜಾಹೀರಾತು ನೀಡಿಕೆ, ಗೂಗಲ್ ಪ್ಲೇ ಸ್ಟೋರ್ ಅಥವಾ ಆಪಲ್ ಆಪ್ ಸ್ಟೋರ್‌ನಲ್ಲಿ ಕನಿಷ್ಠ 1 ಲಕ್ಷ ಡೌನ್‌ಲೋಡ್ ಹೊಂದಿರುವ ಯಾವುದೇ ಆಪ್ ಮತ್ತು ಸುದ್ದಿಗಳನ್ನು ಪ್ರಸಾರ ಮಾಡುವ ಯಾವುದೇ ಡಿಜಿಟಲ್ ಘಟಕ–ವೆಬ್ ಅಪ್ಲಿಕೇಶನ್ ಅಥವಾ ಮೊಬೈಲ್ ಅಪ್ಲಿಕೇಶನ್ ಸೇರಿದಂತೆ ವಿವಿಧ ಮೂಲಗಳಿಂದ ಸುದ್ದಿಗಳನ್ನು ಸಂಗ್ರಹಿಸಿ ಜನರಿಗೆ ನೀಡುವ ವೇದಿಕೆಗಳು. ಇನ್‌ಶಾರ್ಟ್ ಮತ್ತು ಹೆಚ್ಚಿನ ಸಂಖ್ಯೆಯಲ್ಲಿ ಫಾಲೋವರ್‌ಗಳನ್ನು ಹೊಂದಿರುವ ಇನ್‌ಫ್ಲ್ಯುಯೆನ್ಸರ್‌ಗಳು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯಲ್ಲಿ ನೋಂದಾಯಿಸಿಕೊಂಡು ಜಾಹೀರಾತು ಪಡೆಯಲು ಅರ್ಹತೆ ಹೊಂದುತ್ತವೆ.

ಡಿಜಿಟಲ್ ಜಾಹೀರಾತಿಗಾಗಿ ಕರ್ನಾಟಕ ಸರ್ಕಾರದ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯೊಂದಿಗೆ ಸಹಯೋಗ ಹೊಂದಲು ಬಯಸುವ ಏಜೆನ್ಸಿಗಳು ಭಾರತ ಸರ್ಕಾರದ ರಿಜಿಸ್ಟ್ರಾರ್ ಆಫ್ ಕಂಪನೀಸ್ ನಲ್ಲಿ ನೋಂದಣಿಯಾದ ಪ್ರೈವೇಟ್ ಲಿಮಿಟೆಡ್ ಕಂಪನಿ, ಪಬ್ಲಿಕ್ ಲಿಮಿಟೆಡ್ ಕಂಪನಿ, ಪಾಲುದಾರಿಕೆ, ಲಿಮಿಟೆಡ್ ಲಯಬಿಲಿಟಿ ಪಾಲುದಾರಿಕೆ ಹೊಂದಿರಬೇಕು. ಎಂಪ್ಯಾನೆಲಿಂಗ್ ಸಮಯದಲ್ಲಿ ಕನಿಷ್ಠ ಎರಡು ವರ್ಷಗಳಾಗಿರಬೇಕು. ಜಿಎಸ್‌ಟಿ ನೋಂದಣಿ ಇರಬೇಕು. ಕರ್ನಾಟಕದಲ್ಲಿ ಕಾರ್ಯನಿರ್ವಹಿಸುತ್ತಿರಬೇಕು ಅಥವಾ ಕರ್ನಾಟಕದಲ್ಲಿ ಪೂರ್ಣ ಪ್ರಮಾಣದ ಕಚೇರಿ ಇರಬೇಕು. ಕನ್ನಡ ಮತ್ತು ಇಂಗ್ಲೀಷ್ ನಲ್ಲಿ ಪ್ರಾವೀಣ್ಯತೆ ಇರಬೇಕು.


ಡಿಜಿಟಲ್ ಜಾಹೀರಾತು ಮತ್ತು ಸಾಮಾಜಿಕ ಜಾಲತಾಣದ ಬಗ್ಗೆ ಆಳವಾದ ಜ್ಞಾನವಿರಬೇಕು. ಸರ್ಕಾರಗಳಿಗೆ ಪ್ಲಾಟ್‌ಫಾರ್ಮ್‌ಗಳಲ್ಲಿ ಡಿಜಿಟಲ್ ಜಾಹೀರಾತು ನೀಡಲು ಗೂಗಲ್ ಅಥವಾ ಮೆಟಾ ಜೊತೆಗೆ ಮಾನ್ಯವಾದ ಒಪ್ಪಂದ/ಒಡಂಬಡಿಕೆ ಹೊಂದಿರಬೇಕು. ತಮ್ಮ ಪ್ಲಾಟ್‌ಫಾರ್ಮ್‌ಗಳಲ್ಲಿ ಸರ್ಕಾರದ ಜಾಹೀರಾತು ನೀಡಲು ಗೂಗಲ್ ಅಥವಾ ಮೆಟಾದಿಂದ ಅನುಮತಿ ಪಡೆದುಕೊಂಡಿರಬೇಕು ಎಂದು ಷರತ್ತುಗಳನ್ನು ನಿಗದಿ ಪಡಿಸಿದೆ.

ಡಿಜಿಟಲ್ ಮಾಧ್ಯಮ ಘಟಕಕ್ಕೆ ಅರ್ಹತೆ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯೊಂದಿಗೆ ಡಿಜಿಟಲ್ ಜಾಹೀರಾತು ನೀಡಲು ಎಂಪ್ಯಾನೆಲ್‌ಮೆಂಟ್‌ಗಾಗಿ ಡಿಜಿಟಲ್ ಮಾಧ್ಯಮ ಘಟಕವು ಭಾರತದ ಸರ್ಕಾರದ ರಿಜಿಸ್ಟ್ರಾರ್ ಆಫ್ ಕಂಪನೀಸ್‌ನಲ್ಲಿ ನೋಂದಣಿಯಾದ ಕಾನೂನುಬದ್ಧ ಸಂಘಟಿತ ಘಟಕವಾಗಿರಬೇಕು.

ಕನಿಷ್ಠ ಒಂದು ವರ್ಷ ಕಾಲ ಯಾವುದೇ ಸಮಯದ ಅಂತರವಿಲ್ಲದೆ ನಿರಂತರವಾಗಿ ಕಂಟೆಂಟ್ ಪ್ರಕಟಿಸಿರಬೇಕು. ಜಿಎಸ್‌ಟಿ ನೋಂದಣಿ ಇರಬೇಕು. ರಾಜ್ಯ ಅಥವಾ ಕೇಂದ್ರ ಸರ್ಕಾರ ಅಥವಾ ಅದರ ಏಜೆನ್ಸಿಗಳ ಎಲ್ಲ ಶಾಸನಬದ್ಧ ಅವಶ್ಯಕತೆಗಳನ್ನು ಅನುಸರಿಸಲು ವಿಫಲವಾದರೆ ಎಂಪ್ಯಾನೆಲ್ಮೆಂಟ್ ರದ್ದುಗೊಳಿಸಲಾಗುತ್ತದೆ. ಭಾರತದ ಕಾನೂನನ್ನು ಉಲ್ಲಂಘಿಸುವ ಪದ, ದೃಶ್ಯಗಳು, ಆಡಿಯೋ ಅಥವಾ ಅಂತಹ ಯಾವುದೇ ವಿಷಯವನ್ನು ಪ್ರಕಟಿಸಿರಬಾರದು ಎಂಬ ಷರತ್ತುಗಳನ್ನು ವಿಧಿಸಲಾಗಿದೆ.

ಮೇಲ್ಕಂಡ ಅರ್ಹತೆಗಳನ್ನು ಹೊಂದಿರುವ ಡಿಜಿಟಲ್ ಮಾಧ್ಯಮ ಘಟಕಗಳು ಮತ್ತು ಡಿಜಿಟಲ್ ಜಾಹೀರಾತು ಏಜೆನ್ಸಿಗಳು sevasindhu.karnataka.gov.in ಗೆ ಭೇಟಿ ನೀಡಿ, ನಿಗದಿಪಡಿಸಿರುವ ದಾಖಲಾತಿಗಳೊಂದಿಗೆ ಶುಲ್ಕ ಪಾವತಿಸಿ, ಮೇ 15ರ ಒಳಗೆ ಅರ್ಜಿ ಸಲ್ಲಿಸಲು ಕೋರಿದೆ.

## ಆನಂದ ಬಾಣ




# ಇಂದು ವರನಟ ಡಾ.ರಾಜ್ 97ನೇ ಜನ್ಮದಿನಾಚರಣೆ

## ವಿಜಯನಗರ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಬೆಳಿಗ್ಗೆ 11ಕ್ಕೆ

■ **ಹಂಪಿ ಟೈಮ್ಸ್ ಹೊಸಪೇಟೆ**

ವರನಟ ಡಾ.ರಾಜಕುಮಾರ್ ರವರ 97 ನೇ ಜನ್ಮದಿನಾಚರಣೆಯನ್ನು ಏ.24 ರಂದು, ಬೆ.11 ಗಂಟೆಗೆ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಜಯಂತಿ ಆಚರಿಸಲಾಗುವುದು ಎಂದು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಹಿರಿಯ ಸಹಾಯಕ ನಿರ್ದೇಶಕರಾದ ಧನಂಜಯಪ್ಪ.ಬಿ ತಿಳಿಸಿದ್ದಾರೆ.

ಕಾರ್ಯಕ್ರಮದಲ್ಲಿ ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ್, ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ನೊಂಗ್ಜಾಯ್ ಮೊಹಮ್ಮದ್ ಅಲಿ ಅಕ್ರಮ್ ಷಾ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶ್ರೀಹರಿಬಾಬು.ಬಿ.ಎಲ್ ಸೇರಿದಂತೆ ಎಲ್ಲಾ ಜಿಲ್ಲಾಮಟ್ಟದ ಅಧಿಕಾರಿಗಳು ಭಾಗಹಿಸಲಿದ್ದಾರೆ.



## ಮೈಕ್ರೋ ನ್ಯೂಸ್

### ಬ್ಯಾಚುಲರ್ ಆಫ್ ವಿಜುವಲ್ ಆರ್ಟ್ಸ್ (ಬಿವಿಎ) ಕೋರ್ಸ್‌ಗೆ ಅರ್ಜಿ ಅಹ್ವಾನ

■ **ಹಂಪಿ ಟೈಮ್ಸ್ ಹೊಸಪೇಟೆ**

ಮೈಸೂರು ವಿಶ್ವವಿದ್ಯಾನಿಲಯಕ್ಕೆ ಸಂಯೋಜನೆಗೊಂಡಿರುವ ಚಾಮರಾಜೇಂದ್ರ ಸರ್ಕಾರಿ ದೃಶ್ಯಕಲಾ ಕಾಲೇಜಿನಲ್ಲಿ 2025–26ನೇ ಶೈಕ್ಷಣಿಕ ಸಾಲಿಗೆ ಪ್ರಥಮ ಬ್ಯಾಚುಲರ್ ಆಫ್ ವಿಜ್ಯುಯಲ್ ಆರ್ಟ್ಸ್ (ಬಿವಿಎ) ಪದವಿ ಪ್ರವೇಶಾತಿಗೆ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ಪದವಿಯಲ್ಲಿ 3ನೇ ಸೆಮಿಸ್ಟರ್‌ನಿಂದ ಚಿತ್ರಕಲೆ, ಶಿಲ್ಪಕಲೆ, ಗ್ರಾಫಿಕ್ಸ್ ಕಲೆ (ಅಚ್ಚುಕಲೆ), ಅನ್ವಯ ಕಲೆ, ಕಲಾ ಇತಿಹಾಸ ಹಾಗೂ ಛಾಯಚಿತ್ರ ಮತ್ತು ಛಾಯಚಿತ್ರ ಪತ್ರಿಕೋದ್ಯಮ ವಿಭಾಗಗಳಲ್ಲಿ ವಿಶೇಷ ಅಧ್ಯಯನದ ಸ್ನಾತಕ ಪದವಿಯಾಗಿರುತ್ತದೆ. ಆಸಕ್ತ ಅಭ್ಯರ್ಥಿಗಳು ಕರ್ನಾಟಕ ಸರ್ಕಾರದ ಅಂತರ್ಜಾಲ ವಿಳಾಸ http://uucms.karnataka.gov.in ಅಥವಾ https://www.cavamysore.karnataka.gov.in ವೆಬ್‌ಸೈಟ್ ಮೂಲಕ ಅರ್ಜಿ ಸಲ್ಲಿಸಬಹುದು ತಿಳಿಸಿದ್ದಾರೆ.

# ಮಂಗಳೂರು ವಾಟರ್ ಮೆಟ್ರೋಗೆ ಸಿಎಂ ಗ್ರೀನ್ ಸಿಗ್ನಲ್

## ಡ್ರೋಣ್ ಮೂಲಕ ದ್ವೀಪಗಳ ಸರ್ವೇಗೆ ಸೂಚನೆ



■ **ಹಂಪಿ ಟೈಮ್ಸ್ ಬೆಂಗಳೂರು**

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಅಧ್ಯಕ್ಷತೆಯಲ್ಲಿ ಕಾವೇರಿ ನಿವಾಸದಲ್ಲಿ ಬುಧವಾರ ಕರ್ನಾಟಕ ಜಲಸಾರಿಗೆ ಮಂಡಳಿಯ ಸಭೆ ನಡೆಯಿತು.

ರಾಜ್ಯದ ಬಂದರುಗಳು ಅಭಿವೃದ್ಧಿ, ಜಲಸಾರಿಗೆ ಯೋಜನೆಗಳ ಪ್ರಗತಿ, ಸರಕು ಸಾಗಣೆಗೆ ಅವಶ್ಯವಿರುವ ಮೂಲ ಸೌಲಭ್ಯಗಳ ಬಗ್ಗೆ ಸಮಿತಿಯಲ್ಲಿ ಚರ್ಚಿಸಲಾಯಿತು.

ಮಂಗಳೂರಿನ ಗುರುಪುರ– ನೇತ್ರಾವತಿ ನದಿಯಲ್ಲಿ ಮಂಗಳೂರು ವಾಟರ್ ಮೆಟ್ರೋ ಯೋಜನೆ ಕಾರ್ಯಗತಗೊಳಿಸಲು ಸಿಎಂ ಸಿದ್ದರಾಮಯ್ಯ ಅವರು ಸಭೆಯಲ್ಲಿ ಒಪ್ಪಿಗೆ ಸೂಚಿಸಿದರು.

ಇದರ ಜೊತೆಗೆ ಸಾಗರಮಾಲಾ ಯೋಜನೆಯಡಿಯಲ್ಲಿ ಮಂಗಳೂರಿನಲ್ಲಿ ಕರ್ನಾಟಕ ಜಲಸಾರಿಗೆ ತರಬೇತಿ ಕೇಂದ್ರವನ್ನು ಸ್ಥಾಪಿಸಲು ಸಹ ಮುಖ್ಯಮಂತ್ರಿಯವರು ಒಪ್ಪಿಗೆ ನೀಡಿ ಆದೇಶಿಸಿದ್ದಾರೆ.

ಕರ್ನಾಟಕ ಜಲಸಾರಿಗೆ ಮಂಡಳಿ ಒಟ್ಟು 399 ಹುದ್ದೆಗಳನ್ನು ಹೊಂದಿದ್ದು, ಅದರಲ್ಲಿ 281 ಹುದ್ದೆಗಳು ಖಾಲಿ ಇವೆ. ಖಾಲಿ ಇದ್ದ ಹುದ್ದೆಗಳಲ್ಲಿ ಕೆಲವು ಪ್ರಮುಖ ಪಾತ್ರದ ಹುದ್ದೆಗಳು ಸೇರಿಸಲಾಗಿದ್ದು, ಪರಿಣತಿಯುಳ್ಳ ಹಿರಿಯ ಅಧಿಕಾರಿಗಳನ್ನು ಪರಿಗಣಿಸುವಂತೆ ಸಿಎಂ ಅವರಿಗೆ ಕೆ.ಎಂ.ಬಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಬಾಲಚಂದ್ರ ಹೆಚ್ ಅವರು ಮನವಿ ಸಲ್ಲಿಸಿದ್ದು, ಇದಕ್ಕೆ ಸಿಎಂ ಸಕರಾತ್ಮಕವಾಗಿ ಸ್ಪಂಧಿಸಿದ್ದಾರೆ.

ಕಾರವಾರ ಬಂದರುದಿಂದ ಸರಕು ಸಾಗಣೆಯ ಸಲುವಾಗಿ ಕೊಂಕಣ್ ರೈಲ್ವೇಸ್ ಕಾರ್ಪೋರೇಷನ್ ಲಿಮಿಟೆಡ್ನ ಸಹಯೋಗದಲ್ಲಿ ಅಮ್ದಳ್ಳಿ ರೈಲ್ವೆ ಸೈಡಿಂಗ್ ಅಭಿದ್ಧಿಪಡಿಸುವುದರ ಬಗ್ಗೆ ಕೆ.ಎಂ.ಬಿ ಸಿಇಒ ಅವರು ಪ್ರಸ್ತಾವಣೆ ಸಲ್ಲಿಸಿದರು.

ರಾಜ್ಯ ಸರ್ಕಾರ 2010 ರಲ್ಲಿ ಹೊನ್ನಾವರ ಬಂದರು ಮಿತಿಯ ಹೊನ್ನಾವರ ಮತ್ತು ಕಾಸರಕೋಡಿನ ಬದಿಯಲ್ಲಿ ಬಾರ್ಜ್/ದೋಣಿ ಲೋಡಿಂಗ್ ಸೌಲಭ್ಯದ ಅಭಿವೃದ್ಧಿಗಾಗಿ ಹೈದರಾಬಾದ್‌ನ ಎಂ/ಎಸ್. ಉತ್ತರ ಕನ್ನಡ ಸಿ ಪೋರ್ಟ್ಸ್, ಜಿವಿಪಿಆರ್ ಇಎಲ್ – ಕನ್ಸೋರ್ಟಿಯಂಗೆ 30 ವರ್ಷಗಳ ಗುತ್ತಿಗೆ ಆಧಾರದ ಮೇಲೆ 1,37,560 ಚದರ ಮೀಟರ್ ಬಂದರು ಭೂಮಿಯನ್ನು ಮಂಜೂರು ಮಾಡಿದೆ. ಈ ಯೋಜನೆಯ ಅಭಿವೃದ್ಧಿಗಾಗಿ ಹೊನ್ನಾವರ ಮತ್ತು ಕಾಸರಕೋಡಿನ ಬದಿಯಲ್ಲಿ ಬಂದರು ಭೂಮಿಯನ್ನು ಕಾಯ್ದಿರಿಸಲಾಗಿದೆ ಇದಕ್ಕೆ ಸಿಎಂ ಅವರು ಅನುಮತಿ ನೀಡುವಂತೆ ಕೆ.ಎಂ.ಬಿ ಸಿಇಒ ಅವರು ಪ್ರಸ್ತಾವನೆ ಸಲ್ಲಿಸಿದರು.

ಪುನರ್ವಸತಿ, ಬಂದರು ಸಂಬಂಧಿತ ಕಾರ್ಯಾಚರಣೆಗಳಿಗೆ ಭೂಮಿ ಹಂಚಿಕೆ ಗುತ್ತಿಗೆ ಅವಧಿಯನ್ನು ಪರಿಶೀಲಿಸಿ, ಪ್ರಸ್ತಾವನೆ ಸಲ್ಲಿಸಲು ಅಧಿಕಾರಿಗಳಿಗೆ ಸೂಚಿಸಿದ್ದು ಜತೆಗೆ ಅತಿಕ್ರಮಣ ಮಾಡಿಕೊಂಡಿರುವವರನ್ನು ಕೂಡಲೇ ಎತ್ತಂಗಡಿ ಮಾಡುವಂತೆ ಅಧಿಕಾರಿಗಳಿಗೆ ಸಿಎಂ ಸೂಚಿಸಿದರು.

ಉತ್ತರ ಕನ್ನಡ ಜಿಲ್ಲೆಯಲ್ಲಿ ಗುರುತಿಸಲಾಗಿರುವ ದ್ವೀಪಗಳಿಗೆ ಸಂಬಂಧಿಸಿದಂತೆ ಡ್ರೋಣ್ ಮೂಲಕ ಸರ್ವೇ ಮಾಡಿಸಿ, ಇನ್ನು ಮೂರು ತಿಂಗಳ ಒಳಗಾಗಿ ವರದಿ ನೀಡುವಂತೆ ಉತ್ತರ ಕನ್ನಡ ಜಿಲ್ಲಾಧಿಕಾರಿಗಳಿಗೆ ಸೂಚಿಸಿದರು.

ಆಂಧ್ರ ಪ್ರದೇಶ, ವಿಶಾಖಪಟ್ಟಣ, ಕೇರಳ, ತಮಿಳು ನಾಡು, ಗುಜರಾತ್ ಗಳಲ್ಲಿ ಬಂದರುಗಳು ಹೇಗೆ ಕಾರ್ಯನಿರ್ವ ಹಿಸುತ್ತಿವೆ ಎಂಬುದರ ಬಗ್ಗೆ ಅಧ್ಯಯನ ಮಾಡಿ ವರದಿ ಸಲ್ಲಿಸಲು ಅಧಿಕಾರಿಗಳಿಗೆ ಸೂಚನೆ ನೀಡಿದ್ದು, ಮುಂದಿನ ದಿನಗಳಲ್ಲಿ ರಾಜ್ಯದ ಬಂದರುಗಳಿಗೆ ಎಲ್ಲಾ ರೀತಿಯ ಸೌಲಭ್ಯ ನೀಡುವುದಾಗಿ ಸಿಎಂ ಅವರು ಭರವಸೆ ನೀಡಿದರು.

ಸಭೆಯಲ್ಲಿ ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರಾದ ಮಂಕಾಳ ಎಸ್ ವೈದ್ಯ, ಸರ್ಕಾರದ ಮುಖ್ಯಕಾರ್ಯದರ್ಶಿ ಡಾ. ಶಾಲಿನಿ ರಜನೀಶ್, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆಯ ಕಾರ್ಯದರ್ಶಿ ಎನ್ ಮಂಜುಳಾ ಸೇರಿದಂತೆ ಅನೇಕ ಅಧಿಕಾರಿಗಳು ಭಾಗವಹಿಸಿದ್ದರು.